Ambar Charaka Class in Anekal Town.

Q.—590. Srimathi LAKSHMIDEVI RAMANNA (Hoskote—Anekal). –

Will the Government be pleased to state :—

(*a*) when the Ambar Charaka class was started as an experimental measure in Anekal Town;

(*b*) the number of charakas working at present;

(*c*) whether it has come to their notice that the abovesaid class is becoming popular ?

A.—Sri H. M. CHANNABASAPPA (Minister for Industries).—

(*a*) Parishramalaya was started on 15th December 1955.

(*b*) 21.

(*c*) Yes.

Maharaja's Mills, Bangalore (Re-entertainment of men thrown out).

Q.—623. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) what were the demands and proposals put forward before the three-man committee appointed to investigate the 'claims' of the labourers of the Maharaja Mills, Bangalore;

(*b*) how many labourers were thrown out in connection with the previous strike;

(*c*) of them, how many have been re-entertained so far ?

A.—Sri A. G. RAMACHANDRA RAO (Minister for Law and Education).—

(*a*) There was no three-man committee appointed to investigate the claims of the labourers of the Maharaja Mills.

(*b*) 50 workmen had been placed under suspension pending enquiry into charges.

(*c*) 18 have been taken back into service and two have since resigned.

ADJOURNMENT MOTION.

Re: Strike in Mandya Sugar Factory.

1 P.M.

Mr. SPEAKER.—I have received notice of an adjournment motion from Sri Gopala Gowda, which runs like this :

> "This House do now stand adjourned in order to discuss the situation arising out of the strike held by the workers in the Sugar Factory, Mandya from the 13th instant, as the matter is of recent occurrence, public importance and of a definite nature."

Have the Government to say anything in the matter ?

Sri K. HANUMANTHAIYA (Chief Minister).—We will be able to say something tomorrow.

Mr. SPEAKER.—All right, it will be taken up tomorrow. Now the next item of business.

MYSORE APPROPRIATION BILL, 1956—(Introduced).

Sri K. HANUMANTHAIYA (Chief Minister).—Sir, I beg to introduce the Mysore Appropriation Bill, 1956 which has been published in the *Mysore Gazette* Extraordinary dated 13th March 1956 under Rule 48 of the Rules of Procedure and Conduct of Business in the Mysore Legislative Assembly.

Motion to consider.

Sri K. HANUMANTHAIYA.—Sir, I move :

> "That the Mysore Appropriation Bill, 1956 be taken into consideration."

Mr. SPEAKER.—Motion moved :

> "That the Mysore Approrpriation Bill, 1956 be taken into consideration."

‡ Introduced and moved with the recommendation of the Rajpramukh.

*Sri S. SRINIVASA IYENGAR (T.-Narsipur).—Sir, I oppose this Bill. This Bill is to authorise the Government to spend a sum of Rs. 3,49,07,200 out of the Consolidated Fund of the State towards the charges contained in the Bill. We have discussed various Demands yesterday. I have no intention of re-opening the discussions that were held yesterday. I want to bring it to the notice of the House that the Government desire to spend a sum of Rs. 2,82.000 for providing street lights to Vidhana Veedhi out of the Consolidated Funds of the State. I believe this is a legitimate charge on the funds of the Corporation and further, provision of such a large sum for providing street lights to Vidhana Veedhi is also a matter that has to be explained.

Further, the Government propose to introduce or open industrial estates. Whether the Government have been able to select the area and the facility that the Government propose to give in the industrial estate for the advancement of small scale industries, are things that need clarification. 'Industrial estates' have been provided in the Second Five-Year Plan and yet it is very necessary to know how they make the selections and what are the industries that they have thought of to encourage in these estates and to what extent financial assistance or otherwise is going to be given to those that start the industries in these estates and what may be the proprietory right of those that start industries in these areas. They have also said that setting up an industrial estate is a part of the Central scheme. Have the Centre allotted only one such industrial estate or more than one? These are the issues that need clarification and therefore, I oppose the Bill.

(SRI S. GOPALA GOWDA rose.)

Mr. SPEAKER.—Hon'ble Member can speak on the Budget as well.

Sri S. GOPALA GOWDA (Sagar—Hosanagar).—That will be a separate speech.

Mr. SPEAKER.—You want to speak on some items?

*Sri S. GOPALA GOWDA.—Yes.

ಸ್ವಾಮಿ, ನಭೆಯ ಮುಂದೆ ಈಗತಾನೆ ಮಾನ್ಯ ಹಣಕಾಸಿನ ಮಂತ್ರಿಗಳು ಮಂಡಿಸಿರುವ 1956ನೆಯ ಅಪ್ರೊಪ್ರಿಯೇಷ್ನ್ ಬಿಲ್ಲಿನ ವಿಚಾರದಲ್ಲಿ ನಾನು ಇದನ್ನು ವಿರೋಧಿಸುತ್ತ, ಕೆಲವು ವಿಷಯಗಳನ್ನು ನಾನು ಈ ಮಾನ್ಯ ನಭೆಯ ಗಮನಕ್ಕೆ ತರಲಚ್ಛಿಸುತ್ತೇನೆ.

ನಿನ್ನೆಯ ದಿವಸ ಕೆಲವು ಡಿಮ್ಯಾಂಡುಗಳ ಬಗ್ಗೆ ಈ ನಭೆಯ ಮುಂದೆ ಚರ್ಚೆ ನಡೆದನಂತರ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಕೆಲವು ಸಮಜಾಯಿಷಿ ಗಳನ್ನು ಕೊಟ್ಟಿರುತ್ತಾರೆ. ಆ ಸಂದರ್ಭದಲ್ಲಿ ಕೆಲವು ವಿಷಯಗಳ ಬಗ್ಗೆ ಮಾನ್ಯಮಂತ್ರಿಗಳೂ ಕೂಡ ಸಾಕಷ್ಟು ಸಮಂಜಸವಾದ ರೀತಿಯಲ್ಲಿ ವಿಷಯಗಳನ್ನು ಅವರೂ ಕೂಡ ತಿಳಿಸಿರುವುದಿಲ್ಲವೆಂಬುದಾಗಿ ನನಗೆ ಅನಿಸುತ್ತಿದೆ. ಆ ವಿಚಾರಗಳ ಬಗ್ಗೆಯೇ ನಾನೀಗ ಪುನಃ ಪ್ರಶ್ನಿಸಬೇಕಾಗಿದೆ. ಗಂಧದ ಎಣ್ಣೆಯ ವಿಚಾರದಲ್ಲಿ ಕೇಳಿರತಕ್ಕಂಥ ಹಣ ಒಂದು ಲಕ್ಷದ 92 ಸಾವಿರದ 200 ರೂಪಾಯಿಗಳು. ಈ ಬಗ್ಗೆ ನಭೆಯಲ್ಲ ಚರ್ಚೆ ನಡೆಯುತ್ತಿದ್ದಂಥ ಸಂದರ್ಭದಲ್ಲ ಒಂದು ವಿಷಯ ಈ ನಭೆಗೆ ತಿಳಿಯಬಂತು. ಅದೇನೆಂದರೆ ಕಳೆದ ನಾಲ್ಕು ವರ್ಷಗಳಿಂದಲೂ ನಮ್ಮ ಸರ್ಕಾರ ನ್ಯೂಯಾರ್ಕ್‌ನಲ್ಲಿರುವ ಮೆನರ್ಸ್ ಬುಷ್ ಅಂಡ್ ಕಂಪೆನಿಯವರಿಗೆ ಪಾವತಿಮಾಡಬೇಕಾಗಿದ್ದ ಕಮಿಷನ್‌ನ್ನೂ ಕೊಡದೆ ಅವರೊಂದಿಗೆ ಮಾಡಿಕೊಳ್ಳಬೇಕಾಗಿದ್ದಂಥ ಬಹು ಪ್ರಾಮುಖ್ಯವಾದ ಅಗ್ರೀಮೆಂಟ್‌ನ್ನೂ ಸಹ ಇವರು ಮಾಡಿಕೊಂಡಿಲ್ಲವೆಂಬುದಾಗಿ ತಿಳಿಯಿತು. ಆ ವಿಚಾರವಿನ್ನೂ ನಮ್ಮ ಸೆಕ್ರೆಟೇರಿಯೆಟ್ಟಿನಲ್ಲೇ ಪರಿಶೀಲನೆ ಆಗುತ್ತಿದೆಯೆಂಬ ಅಂಶ ನಿನ್ನೆಯ ದಿವಸ ಈ ನಭೆಗೆ ಗೊತ್ತಾಯಿತು. ಆದರೆ ಇದೊಂದು ಸಾಮಾನ್ಯ ವಿಷಯವಾಗಿಯೇ ಇದ್ದರೂ ಈ ವಿಚಾರ ಈ ನಭೆಗೂ ಮತ್ತು ಅನೇಕ ಮಾನ್ಯಸದಸ್ಯರಿಗೂ ಗೊತ್ತಿರಲಿಲ್ಲ. ಈ ವಿಚಾರ ಮಾನ್ಯಸದಸ್ಯರಾದ ಶ್ರೀ ಟಿ. ಮರಿಯಪ್ಪನವರಿಂದ ಈ ನಭೆಗೆ ಗೊತ್ತಾಯಿತು. ಆದರೆ ನಮ್ಮ ಸರ್ಕಾರ ಇಂಥ ವಿಷಯಗಳನ್ನು ನಾಲ್ಕು ವರ್ಷಗಳಿಂದಲೂ ಕೀಗೆ ಬಿದಿಗೊತ್ತಲು ಕಾರಣವೇನು ಎಂಬುದನ್ನು ಪರಿಶೀಲನೆಮಾಡಿದ್ದೇ ಆದರೆ ಇದು ಇವರಿಗೆ ಅಂಥ ಒಂದು ದಕ್ಷತೆ ಇರುವುದಿಲ್ಲ ವೆಂಬುದನ್ನು ತೋರಿನುತ್ತಿರುವುದು ಮಾತ್ರವೇ ಅಲ್ಲದೆ ಇಂಥ ಪ್ರಾಮುಖ್ಯವಾದ ವಿಚಾರಗಳ ಬಗ್ಗೆ ಕೂಡ ನಮ್ಮ ಸರ್ಕಾರಕ್ಕೆ ಎಷ್ಟರಮಟ್ಟಿನ ಒಂದು ನಿರ್ಲಕ್ಷ್ಯ ಮನೋಭಾವವಿದೆ ಎನ್ನುವುದು ಎದ್ದು ಕಾಣುತ್ತಿದೆ. ಈ ಹಣವನ್ನೆಲ್ಲಾ ಈಗ ಈ ಅಪ್ರೊಪ್ರಿಯೇಷ್ನ್ ಬಿಲ್ಲಿನಲ್ಲಿ ಕೇಳಿದ್ದಾರೆ. ಲಂಡನ್ನಿನಲ್ಲಿರುವ ಟ್ರೇಡ್ ಹೈಕಮಿಷನರಿಗೆ ಒಂದು ಲಕ್ಷ ರೂಪಾಯಿಗಳನ್ನು ತೆರಬೇಕಾಗಿದೆಯೆಂದು ಹೇಳಿದ್ದಾರೆ. ಇದರಲ್ಲೆ ಜಪಾನ್ ಮತ್ತು ಫ್ರೆಂಚ್ ಏಜೆನ್ಸಿಗಳಿಗೂ ಕೊಡ ಬೇಕಾಗಿರತಕ್ಕ ಕಮಿಷನ್ ಹಣ ಸೇರಿರುತ್ತದೆಂದು ತಿಳಿಸಿದ್ದಾರೆ. ಆದರೆ ಅದೇ ಸಂದರ್ಭದಲ್ಲಿ "ನಾವು ಅವರಿಗೆ ಸುಮಾರು 30 ವರ್ಷಗಳಿಂದಲೂ ಕಮಿಷನ್ ಪೊಬಲಗನ್ನು ಕೊಟ್ಟಿರುವುದಿಲ್ಲ"ವೆಂದು ಸಂಬಂಧ ಪಟ್ಟ ಮಂತ್ರಿಗಳು ತಿಳಿಸಿದರು. "ಅವರು ಆ ಬಗ್ಗೆ ಬಿಲ್ಲನ್ನು ಕಳುಹಿಸಲಿಲ್ಲ—ಅದಕ್ಕೋಸ್ಕರವಾಗಿ ನಾವು ಆ ಕಮಿಷನ್ ಪೊಬಲಗನ್ನು ಪಾವತಿ ಮಾಡಲಿಲ್ಲ"

ಎನ್ನುವುದಾಗಿ ತಿಳಿಸಿದರು. ಹೀಗೆ ನಮ್ಮ ಕಣ್ಣು ಮುಂದೆ ನಡೆಯುತ್ತಿರುವಂಥ ವಿಷಯಗಳ ಬಗ್ಗೆಯೇ ಎಷ್ಟು ಅಶ್ರದ್ಧೆಯನ್ನು ಸರ್ಕಾರ ತೋರಿಸುತ್ತಿದೆಯೆಂಬ ಅಂಶ ಇದರಿಂದ ಎಲ್ಲರಿಗೂ ಕಂಡುಬರುತ್ತದೆ. ಆದರೆ ಇದು ಪರದೇಶಕ್ಕೆ ಸಂಬಂಧಪಟ್ಟ ವ್ಯವಹಾರವಾದದ್ದರಿಂದ ಆ ದೇಶಗಳೊಡನೆ ನಮ್ಮ ಗೌರವವನ್ನಾದರೂ ಕಾಪಾಡಿಕೊಂಡು ಬರತಕ್ಕ ಉದ್ದೇಶದಿಂದ ಇವರು ಈ ವಿಚಾರದಲ್ಲಿ ಬಹಳ ಜಾಗರೂಕರಾಗಿರಬೇಕಾಗಿತ್ತು. ಆದರೆ ಈ ಸರ್ಕಾರ ಆ ರೀತಿ ವರ್ತಿಸದೆ ಇದ್ದುದು ಸರಿಯಾದದ್ದಲ್ಲ. ನಮ್ಮ ಮೈಸೂರು ಸರ್ಕಾರಕ್ಕೆ ಯಾವಾಗ್ಗೂ ಒಣಗಾಂಭೀರ್ಯ ಮಾತ್ರ ಜಾಸ್ತಿಯಾಗಿರುತ್ತದೆ. ಆ ಒಣಗಾಂಭೀರ್ಯ ವೆಂದರೆ ಅದು ಹೇಟದ ಗಾಂಭೀರ್ಯ ಮಾತ್ರ. ಇಂಥ ಕೆಲಸಕಾರ್ಯಗಳೂ ಕೂಡ ನಮ್ಮ ಸರ್ಕಾರದವರ ಒಂದು ಸಾಮಾನ್ಯ ಮನೋವೃತ್ತಿಯಮೇಲೆ ನಿಂತಿರುತ್ತವೆ. ಈ ಸಂದರ್ಭದಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ಈಗ ಈ ಹೈಕಮಿಷನರ್ ಅವರ ನೇಮಕಮಾಡತಕ್ಕದ್ದರ ಅಗತ್ಯ ನಮಗೆ ಅಷ್ಟಾಗಿ ಇರುತ್ತದೆಯೇ? ಈಗಿನಕಾಲ ಮತ್ತು ಆಡಳಿತಕ್ಕೆ ಇದರ ಅವಶ್ಯಕತೆ ಅಷ್ಟಾಗಿದೆಯೇ ಎಂಬುದನ್ನು ಕೇಳಬೇಕಾಗಿದೆ. ಹಿಂದಿನ ಕಾಲದಲ್ಲಿ ಈ ಮೈಸೂರು ಆಗೇನೋ ಒಂದು ಸಂಸ್ಥಾನವಾಗಿತ್ತು. ಆಗ್ಗೆ ಇಲ್ಲಿಂದ ಲಂಡನ್ನಿಗೆ ಹೋಗಿಬರಬೇಕೆಂದಿದ್ದ ಅಧಿಕಾರಿಗಳು ಅಲ್ಲಿ ಉಳಿಯಲು ಅವರಿಗೊಂದು ಮನೆ ಅಲ್ಲಿ ಬೇಕಾಗಿತ್ತು. ಅಲ್ಲದೆ ಹಾಗೊಬ್ಬರು ತಮಗೆ ಪರಿಶ್ರಮವುಳ್ಳವರು ಅಲ್ಲಿದ್ದರೆ ಇವರಿಗೆ ಅಲ್ಲಿ—ಇಲ್ಲಿ ತಿರುಗಾಡಿ ಎಲ್ಲೆಲ್ಲಿ ಏನೇನು ನೋಡಬೇಕಾದ್ದಿರುತ್ತದೋ ಅದನ್ನೆಲ್ಲಾ ನೋಡಿಸಿಕೊಂಡು ಬರಲು ಅಂಥವರೊಬ್ಬರು ಆಗ್ಗೆ ಇರಬೇಕಾಗಿತ್ತು. ಅದಕ್ಕಾಗಿ ಹಿಂದಿನ ಮೈಸೂರು ಸರ್ಕಾರದವರು ಅವರನ್ನು ಇಟ್ಟಿದ್ದರು. ಈಗ ಮೈಸೂರು ಸರ್ಕಾರದವರು ಲಂಡನ್ನಿನಲ್ಲಿ ತಮ್ಮ ಒಂದು ಎಂಬಿಸಿಯನ್ನು ತರೆದಿದ್ದಾರೆ. ಅವರ ಮೂಲಕ ಈಗ ಈ ವ್ಯವಹಾರಗಳನ್ನೆಲ್ಲಾ ನಡೆಸಲು ಏರ್ಪಾಡು ಮಾಡಬಹುದು. ಹೀಗಿರುವಾಗಲೂ ಸಹ ಇಂಥ ಒಬ್ಬ ಹೈಕಮಿಷನರನ್ನು ನೇಮಕಮಾಡಿಕೊಳ್ಳುವಂಥ ಒಂದು ಸಂದರ್ಭದ ಅಗತ್ಯ ನಮ್ಮ ಸರ್ಕಾರಕ್ಕೆ ಇರುತ್ತದೆಯೇ ಎಂಬ ಅಂಶ ಮನ್ನಿಗ ಈ ಮಾನ್ಯಸಭೆಯು ವಿಮರ್ಶೆಮಾಡಿ ಒಂದು ತೀರ್ಮಾನವನ್ನು ಈ ಬಗ್ಗೆ ಕೈಗೊಳ್ಳಬೇಕಾದದ್ದು ಅತ್ಯಗತ್ಯವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ವಿಚಾರದಲ್ಲಿ ಹಣದ ಪ್ರಶ್ನೆಯೊಂದೇ ಅಷ್ಟು ಪ್ರಾಮುಖ್ಯವಾದದ್ದಲ್ಲ. ಸ್ವಲ್ಪ ಜಾಸ್ತಿಯೇ ಖರ್ಚಾಗಲಿ ಅಥವಾ ಕೊಂಚ ಉಳಿತಾಯವೇ ಆಗಲಿ ಅದು ಅಷ್ಟು ಪ್ರಾಮುಖ್ಯವಾದ ವಿಚಾರವಲ್ಲ. ಇದು ಹೆಚ್ಚಾಗಿ ಸರ್ಕಾರದ ನೀತಿಗೆ ಸಂಬಂಧಪಟ್ಟಂಥ ವಿಚಾರವಾಗಿದೆ.

ಇನ್ನು ಮಾನ್ಯ ಮಂತ್ರಿಗಳು ಟೂರಿಂಗ್ ವಿಚಾರವಾಗಿಯೂ ಗೆಸ್ಟ್ ಕ್ವಾರ್ಟರ್ಸ್‌ಗಳ ಬಗ್ಗೆ ಮಾಡಿರತಕ್ಕ ಖರ್ಚುಗಳು, ಅತಿಥಿಗಳ ಬಗ್ಗೆ ಮಾಡಿರತಕ್ಕ ವೆಚ್ಚ, ಇನ್ನು ಮಂತ್ರಿಗಳು ತೆಗೆದುಕೊಂಡಿರುವ ಟಿ.ಎ. ಡಿ.ಎ. ಇತ್ಯಾದಿ ವಿಚಾರಗಳ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಆದರೆ ಅವುಗಳ ಪರವಾಗಿ ಮಂತ್ರಿಗಳು ಕೊಟ್ಟಿರತಕ್ಕ ಉತ್ತರಗಳು ಅಷ್ಟು ಸಮರ್ಪಕವಾಗೇನೂ ಇರುವುದಿಲ್ಲ. ಆದಕಾರಣ ನಾವು ಅವುಗಳನ್ನು ಒಪ್ಪುವುದಕ್ಕಾಗುವುದಿಲ್ಲ. ಸಾಮಾನ್ಯ ರೀತಿಯಲ್ಲಿ ನಮ್ಮ ಹಣಕಾಸಿನ ಸಚಿವರು ನಿನ್ನೆಯ ದಿವಸ ಮಾತನಾಡುತ್ತಾ, 'ಅವರು ಆ ಇಂಪೀರಿಯರ್ ಹೋಟಲನಲ್ಲಿ ಉಳಿದುಕೊಂಡಿದ್ದುದರಿಂದ ಹೆಚ್ಚಿಗೆ ಖರ್ಚೇನೋ ಆಗಿದೆ. ಆದರೆ ಆ ವಿಚಾರ ನನಗೆ ಮೊದಲು ಗೊತ್ತಿರಲಿಲ್ಲ. ಅಷ್ಟೊಂದು ಹಣವನ್ನು ಖರ್ಚು ಮಾಡಿದ್ದು ಬಹಳ ದುಬಾರಿಯೇ ಆಯಿತೆಂದು ನನ್ನ ಮನಸ್ಸಿಗೂ ಅನ್ನಿಸಿತು. ಹಾಗೆ ಆ ದುಬಾರಿ ಆದ ಮೊಬಲಗನ್ನು ಒಂದು ವೇಳೆ ನನ್ನ ಕೈಯಿಂದಲೇ ಕೊಡಬೇಕೆಂದು ಹೇಳುವುದಾದರೆ ಆ ಹಣವನ್ನು ನಾನು ನನ್ನ ಕೈಯಿಂದಲೇ ಹಾಕುವುದಕ್ಕೂ ಸಿದ್ಧವಾಗಿದ್ದೇನೆ' ಎಂಬುದಾಗಿ ತಿಳಿಸಿದರು. ಆದರೆ ಅವರು 'ಈ ಟಿ.ಎ. ಬಾಬಿಗೆ ಹತ್ತು ಸಾವಿರ ರೂಪಾಯಿಗಳಿಗಿಂತಲೂ ಇನ್ನೂ ಜಾಸ್ತಿಯೇ ಬೇಕಾಗಬಹುದು, ಈ ಅಪ್ರೋಪ್ರಿಯೇಷನ್ ಬಿಲ್ಲಿನಲ್ಲಿ ಕೇಳಿರುವುದು ಬಹಳಕಡಮೆಯಾಗಿದೆ. ಡೆಲ್ಲಿಗೆ ಮೂರು-ನಾಲ್ಕು ಜನ ಮಂತ್ರಿಗಳು ಪದೇ ಪದೇ ಹೋಗಬೇಕಾಗಿ ಬರುತ್ತದೆ' ಎಂದು ತಿಳಿಸಿದ್ದಾರೆ. ಇದೇನೂ ಹೊಸ ವಿಚಾರವಲ್ಲ. ನಮ್ಮ ಮಂತ್ರಿಗಳು ಯಾವತ್ತೂ ಹೀಗೆಯೇ ಹೇಳುತ್ತಿದ್ದಾರೆ. ತಾವು ಈ ಹಿಂದಿನ ಸಾಲುಗಳ ಆಯವ್ಯಯದ ತಃಖ್ತೆಯನ್ನು ತೆಗೆದುಕೊಂಡು ನೋಡುವುದಾದರೆ ಈ ಮಂತ್ರಿಗಳ ಟಿ.ಎ. ಬಾಬ್ತು ಹಣ ಪ್ರತಿವರ್ಷವೂ ಹೆಚ್ಚುತ್ತಲೇ ಬರುತ್ತಿದೆ. 1954-55ರಲ್ಲಿ ಎರಡು ಲಕ್ಷದ 90 ಸಾವಿರ ಚಿಲ್ಲರೆ ರೂಪಾಯಿಗಳನ್ನು ಕೇಳಿದ್ದಾರೆ. 1955-56ರಲ್ಲಿ ಎರಡು ಲಕ್ಷದ ಹದಿನೆಂಟು ಸಾವಿರದ ನೂರು ರೂಪಾಯಿಗಳನ್ನು ಕೇಳಿದ್ದುದು ಪುನಃ ರಿವೈಸ್ಡ್ ಎಸ್ಟಿಮೇಟಿನಲ್ಲಿ ಅದು ಎರಡು ಲಕ್ಷದ 59 ಸಾವಿರದ ಐನೂರು ರೂಪಾಯಿಗಳಾಗಿದೆ. ಆದರೆ ಈ ವರ್ಷ ಇದು ಮೂರು ಲಕ್ಷದ 28 ಸಾವಿರ ಕ್ಕೇರಿದೆ. ಹೀಗೆ ಈ ಬಾಬು ಪ್ರತಿವರ್ಷವೂ ಜಾಸ್ತಿಯಾಗುತ್ತಲೇ ಬರುತ್ತಿದೆ. ಆಗಲೇ ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಹೇಳಿದ ಹಾಗೆ ಮಂತ್ರಿಗಳಿಗೆ ಸಂಬಳದ ಬಾಬಿನಲ್ಲಿ ಕೇವಲ 75 ಸಾವಿರ ರೂಪಾಯಿಗಳೆಂದು ಇದ್ದಾಗ್ಗೂ ಟಿ.ಎ. ಮತ್ತು ಡಿ.ಎ. ಹೆಡ್ಡಿನಲ್ಲಿ ಖರ್ಚು ವರ್ಷ ವರ್ಷಕ್ಕೇ ಹೆಚ್ಚಾಗುತ್ತಲೇ ಇದೆ. ಹೀಗೆ ಖರ್ಚನ್ನು ಜಾಸ್ತಿಮಾಡಿಕೊಂಡು ಹೋಗುವುದು ಸೂಕ್ತವಾದದ್ದಲ್ಲ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆಯ ದಿವಸ ಮಾತನಾಡುತ್ತಿದ್ದಾಗ್ಗೆ ಒಂದು ಹೋಲಿಕೆಯನ್ನು ಹಾಕಿಕೊಂಡು ಮಾತನಾಡಿದರು. 'ಶ್ರೀ ಇಮಾಂ ಸಾಹೇಬರ ಸರ್ಕಾರ ವಿದ್ದಾಗ ಏಳುಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗುತ್ತಿತ್ತು; ಆದರೆ ಈಗ ಅದೇ ಬಾಬಿಗೆ ನಮ್ಮ ಸರ್ಕಾರ ಐದುಲಕ್ಷ ರೂಪಾಯಿಗಳನ್ನು ಮಾತ್ರವೇ ಖರ್ಚುಮಾಡುತ್ತಿದೆ' ಎಂದು ಹೇಳಿದರು. ಆದರೆ ಆ ಶ್ರೀ ಇಮಾಂರವರ ಸರ್ಕಾರ ಇದ್ದುದು ಯಾರ ಕಾಲವಾಯಿತು, ಅದು ಹೋಗಿ ಎಷ್ಟು ದಿವಸಗಳಾದುವು ಎಂಬ ವಿಚಾರ ಎಲ್ಲ ಮಾನ್ಯ ಸದಸ್ಯರುಗಳಿಗೂ ಗೊತ್ತಿರತಕ್ಕದ್ದೇ ಆಗಿದೆ. ಶ್ರೀ ಇಮಾಂರವರು ಮಂತ್ರಿಗಳಾಗಿದ್ದಂಥ ಕಾಲ, ರಾಜ-ಮಹಾರಾಜರುಗಳು ಇದ್ದಂಥ ಕಾಲ. ಆಗಿನ ಕಾಲದಲ್ಲಿ ಆ ರಾಜ-ಮಹಾರಾಜರ ದರ್ಬಾರ್ ಚೆನ್ನಾಗಿ ನಡೆಯುತ್ತಿತ್ತು. ಅವರು ತಮ್ಮ ಮನಸ್ಸಿಗೆ ಬಂದಹಾಗೆ ನಡೆಯಲು ಅವರಿಗೆ ಅವಕಾಶವಿತ್ತು. ಪ್ರಜಾ ಹಿತಕ್ಕೆ ಅವಶ್ಯಕವಾದ ಕೆಲಸಗಳನ್ನು ಅವರು ಅವರ ಮನಸ್ಸಿಗೆ ಬಂದರೆ ಮಾಡುತ್ತಿದ್ದರು, ಇಲ್ಲದಿದ್ದರೆ ಕೈಬಿಡುತ್ತಿದ್ದರು. ಆದರೆ ಅಂಥ ಸರ್ಕಾರವನ್ನು ಮಾನ್ಯ ಹನುಮಂತಯ್ಯನವರ ಸರ್ಕಾರಕ್ಕೆ ಹೋಲಿಕೆ ಮಾಡಿಕೊಂಡು ಮಾತನಾಡಿದ್ದು ಅಷ್ಟು ಸಮಂಜಸವಾದ ಹೋಲಿಕೆಯಲ್ಲ. ಇದು ತಪ್ಪು ಹೋಲಿಕೆ ಎನ್ನುವುದು ಬಹುಶಃ ಈಗ ಅವರ ಮನಸ್ಸಿಗೆ ಹೊಳೆದಿರಬಹುದು.

Sri K. HANUMANTHAIYA.—To what extent shall we limit that amount—that is a matter that can be easily settled.

ಶ್ರೀ ಎಸ್. ಗೋಪಾಲಗೌಡ.—ಇದರ ಬಗ್ಗೆ ಈಗ ಎಷ್ಟಕ್ಕೆ ಬೇಕೆಂದರೆ ಅಷ್ಟಕ್ಕೇ ಇದನ್ನು ಲಿಮಿಟ್ ಮಾಡಬಹುದು. ನಮ್ಮ ಸಂಪಾದನೆ ಎಷ್ಟಿರುತ್ತದೆಯೋ ಅಷ್ಟಕ್ಕೆ ಅನುಗುಣವಾಗಿದ್ದರೆ ಸಾಕು. ಈಗ ನೂರು ರೂಪಾಯಿ ಮತ್ತು ಅದಕ್ಕಿಂತ ಕಮ್ಮಿ ವರಮಾನ ಪಡೆಯುತ್ತಿರುವ ನೌಕರರು ತಮ್ಮ ಜೀವನವನ್ನು ನಡೆಸಿಕೊಂಡು ಹೋಗುತ್ತಿಲ್ಲವೇನು? ಇದನ್ನು ನೂರು ರೂಪಾಯಿಗಳೆಂದು ನಿಗದಿ ಮಾಡಿಕೊಂಡರೆ ಅಲ್ಲಿಗೆ ಇದು ನೆಗದುಬಿದ್ದುಹೋಯ್ತು.

ಅಧ್ಯಕ್ಷರು.—ಅದೇನು ಹಾಗೆ "ನೆಗದುಬಿದ್ದು ಹೋಯ್ತು" ಎಂದು ಹೇಳುತ್ತಿದ್ದೀರಲ್ಲ?

ಶ್ರೀ ಎಸ್. ಗೋಪಾಲಗೌಡ.—ನೂರು ರೂಪಾಯಿಗಳಂತೆ ಫಿಕ್ಸ್ ಮಾಡಿದರೆ ಅಲ್ಲಿಗೆ ಬಹಳ ಜಾಸ್ತಿ ಆಯಿತು ಅನ್ನುವ ಅರ್ಥದಲ್ಲಿ ಹಾಗೆ ಹೇಳಿದೆನು. ಆದರೆ ನಮಗೆ ಈ ಹೊತ್ತು ದಿನಕ್ಕೆ 250-300 ರೂಪಾಯಿಗಳನ್ನು ಖರ್ಚುಮಾಡುವ ಶಕ್ತಿಯಿದೆಯೋ ಎಂದು ಕೇಳುತ್ತೇನೆ! ಖರ್ಚುಮಾಡುವವರು ಕೆಲವು ಮಹನೀಯರು ಇದ್ದಾರೆ. ಸೌದಿ ಅರೇಬಿಯಾದಂಥ ರಾಜರು ಖರ್ಚುಮಾಡತಕ್ಕದ್ದು ನ್ಯಾಯ. ಏಕೆಂದರೆ, ಅವರಿಗೆ ಹಾಗೆ ಅನುಕೂಲ ಇರುತ್ತದೆ. ಆದರೆ ನಾವು, ಈ ದಿನ ಇಂಡಿಯಾ ದೇಶದಲ್ಲಿ ಇಷ್ಟು ಬಡತನ ಇದ್ದು, ಅವರ ಪ್ರತಿನಿಧಿಯಾಗಿ ಮತ್ತು ಕಾಂಗ್ರೆಸ್ ಸಂಸ್ಥೆಯಲ್ಲಿ ತಾವೇ ಹೇಳಿಕೊಳ್ಳುವ ಹಾಗೆ ನಾವು ಬಡವರ ಉದ್ಧಾರ ಮಾಡುತ್ತೇವೆ ಹರಿಜನರ ಉದ್ಧಾರ ಮಾಡುತ್ತೇವೆ ಎಂದು ಈ ರೀತಿ ಮಾತನಾಡಿಕೊಂಡು—ಶ್ರೀ ನಾಗಯ್ಯ ರೆಡ್ಡಿಯವರು ಅದನ್ನು ಬಹಳ ಚೆನ್ನಾಗಿ ಹೇಳಿದರು ಅದಕ್ಕಿಂತ ಚೆನ್ನಾಗಿ ಹೇಳುವುದಕ್ಕೆ ಯಾರಿಗೂ ಸಾಧ್ಯವಿಲ್ಲ, ಬಹುಶಃ ಹೇಳುವುದಕ್ಕೆ ಕಷ್ಟವಾಗುತ್ತದೆ ಎಂದು ಕಾಣುತ್ತದೆ—ಅಷ್ಟು ಚೆನ್ನಾಗಿ ಸರ್ವೋದಯ ಸಮಾಜ ಮತ್ತು, ಈ ದಿನದ ವರ್ತನೆ, ಆಚಾರ ಮತ್ತು ವಿಚಾರದಲ್ಲಿ ಎಷ್ಟು ಸಮಂಜಸತೆಯಿದೆ ಎಂಬುದನ್ನು ಹೇಳಿದರು. ಯಾರಿಗೇ ಆಗಲಿ ಅಷ್ಟು ಖಚಿತವಾಗಿ ಸತ್ಯವನ್ನು ಹೇಳುವುದಕ್ಕೆ ಧೈರ್ಯಬೇಕು; ಅನೇಕರು ಹೇಳುವುದಿಲ್ಲ ನಮಗೇಕೆ ನಿಷ್ಠೂರ ಎಂದು ನಮ್ಮನ್ನಿದ್ದು ಬಿಡುತ್ತಾರೆ. ಅವರು ಬಹಳ ಚೆನ್ನಾಗಿ ಹೇಳಿದರು. ಅದ್ದರಿಂದ ಇಲ್ಲಿ ಹೇಳಿಕೆಗೂ, ಆಚಾರ ವಿಚಾರಕ್ಕೂ ಸ್ವಲ್ಪ ಹತ್ತಿರ ಹತ್ತಿರ ಸಂಬಂಧವನ್ನು ಇಟ್ಟುಕೊಳ್ಳಬೇಕು. ತಂಜಾವೂರಿಗೆ ಹೋದಾಗ 230 ರೂಪಾಯಿ ಖರ್ಚಾಯಿತು ಎಂದು ಮಾನ್ಯ ಸದಸ್ಯರು ಹೇಳಿದರು. ತಾವು ದೆಹಲಿಗೆ ಹೋದಾಗ 200 ರೂಪಾಯಿ ಹೋಟೇಲ್‌ನವರು ಚಾರ್ಜ್‌ಮಾಡಿದರು ಎಂದರು. ನಿಜ, ಶಿಷ್ಟ ಇರುತ್ತದೆ, ಕೆಲಸ ಮಾಡುವುದಕ್ಕಾಗುವುದಿಲ್ಲ. ಆದರೆ ಖರ್ಚುಮಾಡುವುದಕ್ಕೂ ಒಂದು ಮಿತಿ ಇದೆ. ಅದನ್ನು ಮೀರಿ ಹೋದರೆ ಕಷ್ಟ. ಹೊರದೇಶದವರನ್ನು ಕರೆಸುವುದು, ಅವರಿಗೆ ಒಳ್ಳೆಯ ಸೌಲಭ್ಯಗಳಿರಬೇಕು ಎನ್ನುವುದು ಎಲ್ಲರಿ, ಶ್ರೀ ನೆಹರೂರವರೂ ಅದೇ ರೀತಿ ಮಾಡಿಕೊಂಡಿದ್ದಾರೆ. ಆದರೆ ಅದರಿಂದ ಹೊರ ದೇಶದಲ್ಲಿ ನಮ್ಮ ಗೌರವ ಹೆಚ್ಚುತ್ತದೆ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು ಭ್ರಾಂತಿ ಎಂದು ಹೇಳುತ್ತೇನೆ. ಏಕೆಂದರೆ, ನಮಗೆ ಗೊತ್ತಿದ್ದಹಾಗೆ ಬೆಂಗಳೂರು, ಮೈಸೂರಿಗೆ ಬಂದವರು ಈ ಊರುಗಳನ್ನು ಚೆನ್ನಾಗಿ ಹೊಗಳುತ್ತಾರೆ ಎಂಬುದು ನಮಗೆ ಗೊತ್ತು. ಯಾರೇ ಆಗಲಿ ರೆಸಿಡೆನ್ಸಿರೋಡ್‌ನಲ್ಲಿ ಕರೆದುಕೊಂಡು ಹೋಗಿ ಒಳ್ಳೊಳ್ಳೆಯ ಕಟ್ಟಡಗಳನ್ನು ತೋರಿಸಿದರೆ ಚೆನ್ನಾಗಿದೆ ಎಂದು ಹೇಳಿಯೇ ಹೇಳುತ್ತಾರೆ. ನಮ್ಮಲ್ಲಿ ಸ್ಕಮ್ಸ್ ಇಲ್ಲವೇ, ಬಡವರಿಲ್ಲವೇ? ಇದ್ದಾರೆ. ಅವನ್ನೆಲ್ಲಾ ತೋರಿಸಿದರೆ ಇವರಿಗೆ ತಿಳಿದುಕೊಳ್ಳುವುದಕ್ಕೆ ತಕ್ಕ ಇಲ್ಲವೇ? ನಮ್ಮಲ್ಲಿ ಬಡತನ ತುಂಬ ತುಳುಕುತ್ತಾ ಇದೆ. ಅನೇಕರು ರಸ್ತೆಯ ಪಕ್ಕದಲ್ಲಿ ಪೇವ್‌ಮೆಂಟ್ಸ್ ಮೇಲೆ ಮಲಗಿಕೊಳ್ಳುತ್ತಾರೆ. ಇದನ್ನೆಲ್ಲಾ ಅಮೇರಿಕಾದವರು ನೋಡಿಲ್ಲವೇ? ಚಿತ್ರ ತೆಗೆದುಕೊಂಡು ಹೋಗಿಲ್ಲವೇ? ಇಂಗ್ಲೆಂಡಿನವರು, ರಷ್ಯಾದವರು ನೋಡಿಕೊಂಡು ಹೋಗಿಲ್ಲವೇ? ಬರೀ ರೆಸಿಡೆನ್ಸಿ, ಮಹಾರಾಜರ ಅರಮನೆ ಇವುಗಳನ್ನೆಲ್ಲಾ ತೋರಿಸಿ, ಇಂಡಿಯಾ ದೇಶದಲ್ಲಿ ಮೈಸೂರು ಸಂಸ್ಥಾನ ಎಷ್ಟು ಸಂಪದ್ಭರಿತವಾಗಿದೆ ಎಂಬ ಮನೋಭಾವ ಅವರಲ್ಲಿ ಉಂಟಾಗಿದೆ, ಆ ಅಭಿಪ್ರಾಯವನ್ನು ಅವರು ತೆಗೆದುಕೊಂಡು ಹೋಗಿದ್ದಾರೆ ಎಂದು ನಾನಂತೂ ನಂಬುವುದಿಲ್ಲ. ಅದ್ದರಿಂದ ಇಂಥ show ಮಾಡಿದ ಮಾತ್ರಕ್ಕೆ ನಮ್ಮ ಗೌರವ ಹೆಚ್ಚುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಯಾವುದೋ ಒಂದು ಉಪಯುಕ್ತವಾದ ಕೆಲಸಕ್ಕೆ ಒಂದು ಹತ್ತು ರೂಪಾಯಿ ಕೊಡಿ ಎಂದರೆ ನೂರಾರು ತಕರಾರುಗಳನ್ನು ಹೇಳುತ್ತೀರಿ. ಅದೇ ಯಾವುದೋ ಒಂದು ಕಾರ್ಪೊರೇಷನ್‌ಗೆ 64,800 ರೂಪಾಯಿ, ಮತ್ತೊಂದು 10,491 ರೂಪಾಯಿ ಮತ್ತೊಂದು ಅರವತ್ತು ಸಾವಿರದ ರೂಪಾಯಿ, ಇನ್ನೊಂದು ಇಪ್ಪತ್ತು ಸಾವಿರ, 23 ಸಾವಿರ ಈ ರೀತಿ ಎಲ್ಲಾ ಖರ್ಚುಮಾಡಿದ್ದೀರಿ. ಪರದೇಶದವರು ಬಂದಿದ್ದರು ನಿಜ. ಪರದೇಶದವರು ಬಂದರು ಅಂದ ಮಾತ್ರಕ್ಕೆ ನಮ್ಮ ಇತಿಮಿತಿಯನ್ನು ಅರಿತುಕೊಳ್ಳದೇ ಹಣ ಖರ್ಚುಮಾಡುವುದಕ್ಕೆ ನಮ್ಮ ಸಮ್ಮತಿ ಇಲ್ಲ. ಮತ್ತು ಈ ರೀತಿ ಖರ್ಚುಮಾಡುವಾಗ ಎಷ್ಟು ಮಾಡೋಣ ಎಂದು ಮಾನ್ಯ ಮಂತ್ರಿಗಳು ಕೇಳಿದರು. ಎಷ್ಟು ಎಂದರೆ, ನಮಗೆ ಗೊತ್ತಿರುತ್ತದೆ. ಹೇಜಿಗೆ ಹೋದರೆ ಯಾವ ಬಟ್ಟೆ ಕೊಂಡುಕೊಳ್ಳಬೇಕು ಎಂಬುದು ನನಗೆ ಗೊತ್ತಿಲ್ಲವೇ? ಜರತಾರಿ ಬಟ್ಟೆಗಳನ್ನು ನೋಡಿಕೊಂಡು ಕಾಲ ಕಳೆಯುತ್ತೇನೆಯೇ? ಇಲ್ಲ. ನಾನು ಹೋಗುವುದು ಖಾದಿ ಬಟ್ಟೆ ಹ್ಯಾಂಡ್‌ಲೂಂ ಬಟ್ಟೆ ಇವುಗಳಿಗಾಗಿ; ಆರು ರೂಪಾಯಿನ ಸೀರೆ, ಐದು ರೂಪಾಯಿನ ಪಂಚೆ ಇಷ್ಟೇ ಹೊರತು, ಚಂದೀರಾಮ್ ಬ್ರದರ್ಸ್, ಮಹಾಲಕ್ಷ್ಮೀ ಹಾಲ್ ಇಲ್ಲಿಗೆಲ್ಲಾ ಹೋಗಿ ನೋಡುತ್ತಾ ನಿಂತುಕೊಂಡರೆ ಕತ್ತುಹಿಡಿದು ತಳ್ಳುತ್ತಾರೆ. ಅದ್ದರಿಂದ ನಮ್ಮ ದೇಶದ ದುಡಿಮೆ ಮಟ್ಟ ಮತ್ತು ನಾವು ಖರ್ಚುಮಾಡುವುದಕ್ಕೆ ಎಷ್ಟು ಸಾಧ್ಯವಾಗುತ್ತದೆ ಎಂಬುದನ್ನು ನೋಡಿಕೊಂಡು ಖರ್ಚುಮಾಡಬೇಕೇ ಹೊರತು ದೊಡ್ಡವರು ಬಂದರು ಎಂದು ನಾವು ಇಷ್ಟು ದೊಡ್ಡದಾಗಿ ಖರ್ಚುಮಾಡುವುದಕ್ಕಾಗುತ್ತದೆಯೇ? ಅದ್ದರಿಂದ ಇದರ ನೀತಿಯ ಬಗ್ಗೆ ಅವರು ಕೊಟ್ಟಿರುವ ವಿವರಣೆ ನಮ್ಮತವಾಗಲಿಲ್ಲ. ಅದ್ದರಿಂದ ಈ ವಿಷಯ ಪ್ರಸ್ತಾಪ ಮಾಡಿದೆ. ಎಷ್ಟು ಖರ್ಚುಮಾಡಬೇಕು ಎನ್ನುವುದನ್ನೂ ಅವರೇ ತಿಳಿದು ಖರ್ಚುಮಾಡಬೇಕು ಮತ್ತು ಸಭೆಯಲ್ಲೆ ಕೂಡ ಅದನ್ನು ಚರ್ಚೆಮಾಡುವುದಕ್ಕೆ ಸಲಹೆ ಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಈ ಪ್ರವಾಸದ ವಿಷಯದಲ್ಲಿ ಒಂದು ವಿಷಯವನ್ನು ಈಗಲೇ ಹೇಳಬೇಕೆಂದು ಇದ್ದೇನೆ. 'ನಾವೇನೋ ಹೋಗುವುದಿಲ್ಲ. ಜನಗಳೇ ಬನ್ನಿ ಬನ್ನಿ ಎಂದು ಕರೆಯುತ್ತಾರೆ ಅದ್ದರಿಂದ ಹೋಗಬೇಕಾಗುತ್ತದೆ' ಎಂದು ಹೇಳಿದರು. ಇದರಲ್ಲಿ ಎರಡು ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸಾಧ್ಯವಾಮಟ್ಟಿಗೂ ಆಯಾಯಾ ಪ್ರದೇಶದ ಜನಸಾಮಾನ್ಯರ ಅಹವಾಲುಗಳನ್ನು ಕೇಳಿ,

ಅಲ್ಲಿನ ಆಫೀಸುಗಳಲ್ಲಿ ಯಾವ ರೀತಿ ಕೆಲಸ ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ, ಕೆಲಸ ನಡೆಯುತ್ತಿದೆಯೋ ಇಲ್ಲವೋ, ಯಾವ ರೀತಿ ಅರ್ಜಿ, ಇತ್ಯಾದಿಗಳು ಬಗೆಹರಿಯುತ್ತಿವೆ ಎಂಬುದರ ಕಡೆಗೆ ಹೆಚ್ಚು ಗಮನ ಕೊಡುವುದಕ್ಕೆ, ಪ್ರವಾಸ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಯಾರೇ ಅಧಿಕಾರಿಗಳು ಬರಲಿ ಅವರನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು ಎನ್ನುವ ಒಂದು ಗುಂಪೇ ಇದೆ, ಎಂದು ಇಟ್ಟುಕೊಳ್ಳೋಣ. ಅವರು ಸಾಮಾನ್ಯವಾಗಿ ವ್ಯವಸ್ಥೆಯನ್ನು ಮಾಡುತ್ತಾರೆ. ಕೆಲವು ಸಮಾರಂಭಗಳು ಸಾರ್ವಜನಿಕವಾಗಿರುತ್ತವೆ, ಕೆಲವು ವೈಯಕ್ತಿಕವಾಗಿರುತ್ತವೆ. ಅಂಥ ಸಮಾರಂಭಗಳಿಗೆಲ್ಲಾ ಸಾವಿರಾರು ಮೈಲಿಗಳಿಂದ ಬರಬೇಕೆಂದು ಹೇಳುತ್ತಾರೆ. ಇದು ಪ್ರಜಾಪ್ರಭುತ್ವದ ಸರ್ಕಾರ, ಹಿಂದಿನಿಂದ ಜನಗಳೊಡನೆ ಮಿಳಿತವಾಗಿ ಭಾಷಣ ಮಾಡಿದ ಅಭ್ಯಾಸ, ಓಟಿನ ಹಂಗು ಬೇರೆ ಇರುತ್ತದೆ, ಆದಕ್ಕಾಗಿ ಕೆಲವು ರಂಗಗಳನ್ನು ರಚನೆ ಮಾಡಿ ಭಾಷಣಗಳು ಇತ್ಯಾದಿಗಳು ಸಾಂಪ್ರದಾಯಕವಾಗಿ ನಡೆದುಬಂದಿವೆ. ಇದನ್ನು ನೋಡಿದರೆ ಈ ರೀತಿ ಬಹಳ ದೂರ ಹೋಗಿ ಬಂದು ಮಾಡುವ ಒಂದು ಹವ್ಯಾಸ ಇವೊತ್ತು ಹೆಚ್ಚಾಗಿಹೋಗಿದೆ. ಕೆಲಸ ಸುಸೂತ್ರವಾಗಿ ಮಾಡಬೇಕಂದಲ್ಲ. ನಿಜವಾಗಿಯೂ ಏನಾದರೂ ಕುಂದುಕೊರತೆಗಳಿದ್ದರೆ ಅದಕ್ಕೆ ಗಮನ ಕೊಡಲು ಸಂಬಂಧಪಟ್ಟ ಅಧಿಕಾರಿಗಳನ್ನು ಕಳುಹಿಸಿ ಸರಿಯಾದ ರೀತಿಯಲ್ಲಿ ಕೆಲಸ ನಡೆಯುವಂತೆ ಮಾಡಲು ಮತ್ತು ಒಂದು understandingಗೆ ಬರಲು ಸಹಾಯಕವಾಗುವಂತೆ ಮಾಡಲು ಪ್ರವಾಸ ಮಾಡುವುದರಿಂದ ಒಳ್ಳೆಯದಾಗುತ್ತದೆ. ಅಷ್ಟೇ ಹೊರತು ಒಂದೆರಡು ನಿಮಿಷದ ಕೆಲಸಕ್ಕಾಗಿ ನೂರಾರು ಮೈಲಿ ಪ್ರವಾಸ ಮಾಡುವುದರಲ್ಲಿ ಅರ್ಥವಾ ಜನಗಳು ಬನ್ನಿ ಎಂದು ಕರೆದರೆಂದು ಪ್ರವಾಸ ಹೋಗುವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಇತ್ತೀಚೆಗೆ ಇನ್ನೂ ಸ್ವಲ್ಪ ಹಳೆಯ ಪದ್ಧತಿಯನ್ನು ಅನುಸರಿಸುತ್ತಿರುವುದೇ ಕಂಡುಬರುತ್ತಿದೆ. ಅಧಿಕಾರಿಗಳು ಬಂದರೆ ನಿಂತುಕೊಳ್ಳಬೇಕು, ಡಪಾಲ ಹಾಕಿಕೊಂಡ ಜವಾನ ಇರಬೇಕು ಇವೆಲ್ಲಾ ಹಳೆ ಕಾಲದ ಕುರುಹು. ಇದು ಅಧಿಕಾರಿಗಳಲ್ಲಿ ಮತ್ತು ಮಂತ್ರಿಗಳಲ್ಲೂ ಇದೆ. ಇದರಿಂದ ಏನೋ ಒಂದು ತರಹ ವಾತಾವರಣ ಕಲ್ಪನೆಯಾಗುವಂತೆ ಮಾಡುವುದು ಇತ್ತೀಚೆಗೆ ಜಾಸ್ತಿಯಾಗಿದೆ. ಯಾರೋ ಒಬ್ಬರು ಬರುತ್ತಾರೆ ಎಂದರೆ ಒಂದು ದಿವಸವೆಲ್ಲಾ ಪೋಲೀಸ್‌ನವರು ಆ ರಸ್ತೆಗಳಲ್ಲಿ ಓಡಾಡುವ ವಾಹನಗಳು, ಪ್ಯಾಣಿಗಳು, ಮನುಷ್ಯರೆಲ್ಲರನ್ನೂ ತಡೆದು ನಿಲ್ಲಿಸುತ್ತಾರೆ. ಇದು ಏನು ಎನ್ನುವುದೇ ಗೊತ್ತಾಗುವುದಿಲ್ಲ. ನಾವೇ ಇಲ್ಲಿ ಒಂದು ಕಾನೂನನ್ನು ಸಹ ಪಾಸ್ ಮಾಡಿದ್ದೇವೆ. ಶ್ರೀ ಗೋವಿಂದರೆಡ್ಡಿಯವರು ಹೇಳಿದರು, ಹೋಗುವುದು ಸ್ವಲ್ಪ ನಿಧಾನವಾಗಿ ರೈಲು ತಪ್ಪಿದರೆ ಸಾವಿರಾರು ರೂಪಾಯಿ ಲುಕ್ಸಾನಾಗುತ್ತದೆ ಎಂದು. ಇಲ್ಲ ನೋಡಿದರೆ ದಿವಸವೆಲ್ಲಾ ನಿಲ್ಲಿಸಿದ್ದಾರೆ. . . .

Mr. SPEAKER.—In what connection ? Is it in Bangalore ?

ಶ್ರೀ ಎಸ್. ಗೋಪಾಲಗೌಡ.—ಬೆಂಗಳೂರು ಒಂದೇ ಅಲ್ಲ ಶಿವಮೊಗ್ಗಾದಲ್ಲೂ ಈಚೆಗೆ ಪ್ರಕಾಶ್ ರವರು ಬಂದಾಗ ಹಾಗೆಯೇ ಆಯಿತು. ಇದು ಅನಾವಶ್ಯಕ ಎಂದು ಹೇಳುವುದಕ್ಕೆ ಇಷ್ಟು ಹೇಳಿದೆ. ಒಂದು ಮನೋಭಾವದ ಮೇಲೆ ನಿಂತುಕೊಳ್ಳುತ್ತೇವೆ. ಯಾವುದೋ ಒಂದು ಅಪಾಯಕಾರಿ ಸನ್ನಿವೇಶ ಇದ್ದು, ಹೊಡೆದಾಟವಾಗುವ ಸನ್ನಿವೇಶ ಇದ್ದ ಪಕ್ಷದಲ್ಲಿ ಪೋಲೀಸ್‌ನವರ ರಕ್ಷಣೆ ಇರುವುದು ಒಳ್ಳೆಯದು.

Mr. SPEAKER.—The incident referred to by the Hon'ble Member is in connection with the tour of a Dignitary belonging to another State.

ಶ್ರೀ ಎಸ್. ಗೋಪಾಲಗೌಡ.—ಪ್ರವಾಸ ಮಾಡುವುದರ ಬಗ್ಗೆ ಮಂತ್ರಿಗಳು ವಿವರಣೆ ಕೊಟ್ಟರು. T.A. is increasing day by day. ಅವರೂ ಕೂಡ ಅದನ್ನು ನಿರಾಕರಿಸುವುದಿಲ್ಲ. ಆಮೇಲೆ ಇವರು ಪ್ರವಾಸ ಹೋಗುವ ಮುನ್ನ ಕೆಲಕೆಲವು ಇಕ್ಸ್‌ಟ್ರಕ್ಟ್ ಕೊಡುತ್ತಾರೆ ಎಂದು ಕೇಳಿದ್ದೇವೆ. ಮಂತ್ರಿಗಳು ಬರುತ್ತಾರೆ ಎಂದರೆ ಆಯಿತು ಅಧಿಕಾರಿಗಳೆಲ್ಲಾ ಇದ್ದ ಕೆಲಸ ಬಿಟ್ಟು ಅವರ ಕಡೆಗೆ ಹೆಚ್ಚು ಗಮನಕೊಡುತ್ತಾರೆ. ಐದಾರು ಜನ ಮಂತ್ರಿಗಳು ಹೋಗಿಬಿಟ್ಟರೆ, ಐದಾರು ದಿವಸ ಅವರ ಜೊತೆಯಲ್ಲಿ ಓಡಾಡುವುದೇ ಆಗಿಹೋಗುತ್ತದೆ. Some have expressed their difficulties. ಅದು ಬೇರೆ ಪ್ರಶ್ನೆ. ವೈಸ್‌ರಾಯ್ ಬಂದರೆ ಎಷ್ಟು ಖರ್ಚಾಗುತ್ತಾ, ಇತ್ತರೀ! ಮಿರ್ಜಾರವರ ಟೂರ್ ಹೋದಾಗ ಎಷ್ಟು ಖರ್ಚಾಗುತ್ತಾ, ಇತ್ತರೀ ಎಂದು ಕೇಳುತ್ತಾರೆ. ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಅವರು ಯಾವಾಗಲೂ ಬಹಳ ಅಪರೂಪವಾಗಿ ಹೋಗುತ್ತಾ ಇದ್ದರು. ಅದ್ದರಿಂದ ಅಧಿಕಾರಿಗಳಿಗೆ ಹಾಗಿರಬೇಕು, ಹೀಗಿರಬೇಕು ಎಂದು ಹೇಳಿ ಈ ತರಹ ಇಕ್ಸ್‌ಟ್ರಕ್ಷನ್ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಜನತೆಗೆ ಜವಾಬ್ದಾರರಾಗಿರತಕ್ಕ ಮತ್ತು ಈ ನಭೆಯ ಅನುಮತಿ ಪಡೆದು ಆದಳಿತ ನಡೆಸತಕ್ಕ ಮಂತ್ರಿಗಳು ಆ ರೀತಿ ಭಾವನೆ ಇಟ್ಟುಕೊಳ್ಳಬಾರದು ಮತ್ತು, ಆ ರೀತಿ ಆಡಳಿತಕ್ಕೆ ಧಕ್ಕೆ ಬರುವ ರೀತಿಯಲ್ಲಿ ಪ್ರವಾಸ ಮಾಡುವುದು ಯಾಪತ್ತಿಗೂ ಒಳ್ಳೆಯದಲ್ಲ ಎಂದು ಈ ಸಂಬಂಧದಲ್ಲಿ ಹೇಳುತ್ತೇನೆ.

ಇನ್ನು ರೂರಲ್ ಕಮ್ಯೂನಿಕೇಷನ್ ಬಗ್ಗೆ 14 ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಕೊಟ್ಟಿದ್ದೀರಿ. ಇದು ಬಹಳ ಸಂತೋಷದ ವಿಷಯ ಎಂದು ಹೇಳಿ ರಾಜಶೇಖರ ಮೂರ್ತಿಗಳು ಹೇಳಿದರು. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಹಳ್ಳಿಗಳಲ್ಲಿ ಹೆಚ್ಚು ರಸ್ತೆಗಳನ್ನು ಮಾಡಿಸಬೇಕು, ಹಳ್ಳಿಗಳಿಗೆ ಹೆಚ್ಚು ಹಣ ಖರ್ಚು ಮಾಡಬೇಕೆನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ನಾವು ವಿರೋಧ ಮಾಡುವುದಕ್ಕೆ ಏನು ಕಾರಣ ಎಂಬುದನ್ನು ಅವರು ಚೆನ್ನಾಗಿ ತಿಳಿದುಕೊಳ್ಳಬೇಕು. ಶ್ರೀ ಚನ್ನಬಸಪ್ಪನವರು ವಿವರಣೆ ಕೊಡುತ್ತಾ, ಇದು ಸರಿಯಾದ ರೀತಿಯಲ್ಲಿ ಖರ್ಚಾಗುವಂತೆ ಏರ್ಪಾಡು ಮಾಡಿದ್ದೇವೆ, ಮತ್ತು maintain ಮಾಡುವುದಕ್ಕೆ ವಿರೇಜ್ ಪಂಚಾಯ್ತಿ ಮತ್ತು ಡಿಸ್ಟ್ರಿಕ್ ಬೋರ್ಡ್ ಆಕ್ಟ್‌ನಲ್ಲಿ ಅವಕಾಶ ಇದೆ ಎಂದು ಹೇಳಿದರು. ಆದರೆ ಅವರು ಈ ವಿಷಯದಲ್ಲಿ ಸರಿಯಾಗಿ ಪರಿಶೀಲನೆ ಮಾಡಿಲ್ಲ. ಆರ್ಡರ್ ಮಾಡಿರುವುದರಲ್ಲಿ ಬೇಕಾದಷ್ಟು ನ್ಯೂನತೆಗಳು ಇವೆ. ಮಣ್ಣಿನ ರಸ್ತೆಗಳಿಗೆ ಹಣಕೊಡುವುದಿಲ್ಲ ಎಂದು ಹೇಳಿದ್ದಾರೆ. ಇವನ್ನು ಮೇನ್‌ಟೇನ್ ಮಾಡುವವರು ಯಾರು ? ಡಿಸ್ಟ್ರಿಕ್ಟ್ ಬೋರ್ಡ್ ಇಲ್ಲ ಎಂದು ಶ್ರೀ ಭೀಮಪ್ಪನಾಯಕರು ಹೇಳಿದರೆ ಇದೆ ಎಂದು ಸರ್ಕಾರ ಸಮರ್ಥಿಸಿತು. ಇದೆ ಎಂದರೆ ಇದೆ, ಇಲ್ಲ ಎಂದರೆ ಇಲ್ಲ. ಡೆಪ್ಯುಟಿ ಕಮಿಷನರೇ ನಡೆಸಿಕೊಂಡು ಹೋಗುವುದರಿಂದ ಅವರಿಗೇ ಸಾಧ್ಯವಾದಮಟ್ಟಿಗೂ ಅದನ್ನು ವಹಿಸಬೇಕು. ಶ್ರೀ ಶ್ರೀನಿವಾಸ ಅಯ್ಯಂಗಾರ್‌ರವರು ಇನ್ನೊಂದು ಪ್ರಶ್ನೆ ಹಾಕಿದರು.

(ಶ್ರೀ ಎಸ್. ಗೋಪಾಲಗೌಡ.)

ಕರ್ಟೈಜೆಸಿ ಫಂಡ್‌ನಿಂದ ಹಣ ಕೊಟ್ಟು ಮಹೋಪಕಾರ ಮಾಡಿದ್ದೇವೆ ಎಂದು ಹೇಳುಕೊಳ್ಳುತ್ತೀರೇ ಹೊರತು ಯಾವ ರಸ್ತೆಗಳಿಗೆ ಕೊಟ್ಟಿದ್ದೀರಿ, ಯಾರು ಖರ್ಚು ಮಾಡುವವರು ಎಂಬುದನ್ನು ಹೇಳಲಿಲ್ಲ ಎಂದು ಹೇಳಿದರು.

1-30 P.M.

ಈ ಕೆಲವು ಅಂಶಗಳನ್ನು ನಾವು ಪರಿಶೀಲನೆ ಮಾಡಿದರೆ, ಮೊದಲನೆಯದಾಗಿ ಜಿಲ್ಲಾ ಬೋರ್ಡುಗಳನ್ನು ಮುಗಿಸಿಬಿಟ್ಟಿರಿ. ಜಿಲ್ಲಾಬೋರ್ಡುಗಳ ಮನೂದೆ ಬಂದು ಜಿಲ್ಲಾಬೋರ್ಡುಗಳನ್ನು ರದ್ದು ಮಾಡುತ್ತೇವೆಂದು ಸರ್ಕಾರದವರು ಹೇಳಿದಾಗ, ವಿರೋಧ ಪಕ್ಷದವರಾದ ನಾವೂ ಮತ್ತು ಇತರ ಮಹನೀಯರೂ ಜಿಲ್ಲಾಬೋರ್ಡುಗಳನ್ನು ರದ್ದು ಮಾಡುವುದು ನ್ಯಾಯವಾದದ್ದಲ್ಲ ಅವುಗಳನ್ನು ಪುನರ್ರಚನೆ ಮಾಡಬೇಕು ಎಂದು ಹೇಳಿದೆವು. ಆದೇ ಸಮಯದಲ್ಲಿ ಈ ಜಿಲ್ಲಾ ಬೋರ್ಡುಗಳಿಗೆ ಕೊಡುತ್ತಿದ್ದ ಶೇಕಡ 6¼ of land revenue ಏನಿತ್ತು, ಅದಕ್ಕೆ ಸಂಬಂಧಪಟ್ಟ ಕ್ಲಾಜನ್ನು ರದ್ದು ಮಾಡಿದರು. ಈಗ ಈ ರೀತಿ ಒಂದು lumpsum grant ಕೊಡುತ್ತಿದ್ದೀರಿ. ಇದನ್ನು ನಾನು ವಿರೋಧಪಕ್ಷದವನಾಗಿ ತೀವ್ರವಾಗಿ ವಿರೋಧಿಸಬೇಕಾಗಿದೆ. ಯಾಕೆಂದರೆ ಈ ಹಣವನ್ನು ತೆಗೆದು ಕೊಳ್ಳುವುದರಲ್ಲಿ ಏನೋ ಒಂದು ಮಹತ್ತರವಾದ ಬೇಡಿಕೆಗಳನ್ನು ಅವರ ಮುಂದೆ ಇಟ್ಟು ಸರ್ಕಾರದವರು ಅದನ್ನು ಮಂಜೂರು ಮಾಡುವುದು ಎಂಬ ರೀತಿಯ ವ್ಯವಹಾರ ನಡೆಯಬೇಕು ಎಂದು ಇರುವಂತೆ ತೋರುತ್ತದೆ. ಒಂದು ರಸ್ತೆಯಾಗಬೇಕು ಮಹಾ ಪ್ರಭು ಎಂದು ಕೇಳಿದ ಹಾಗೂ, ಕೇಳಿದ ಹಾಗೆ ಕೊಟ್ಟಿದ್ದೇವೆ ಎಂದು ಕೊಡುವ ಹಾಗೂ, 800, 1,000 ರೂಪಾಯಿ ಕೊಟ್ಟು ಆತನು ಊರಿನಲ್ಲಿ ಮಂತ್ರಿಗಳು 800 ರೂಪಾಯಿ ಕೊಟ್ಟಿದ್ದಾರೆ ಎಂದು ಓಡಾಡುವ ಹಾಗೂ ಆಗುತ್ತದೆ.

Mr. SPEAKER.—From the reply given on behalf of the Government, it can be seen that they have allotted amounts to the Deputy Commissioners and that amount is spent by the Deputy Commissioners in consultation with the local people.

ಶ್ರೀ ಎಸ್. ಗೋಪಾಲಗೌಡ.—ಇದರಲ್ಲಿ ಸರಿಯಾಗಿ ಪರಿಶೀಲನೆ ಮಾಡಿಲ್ಲ. ಹಣ ಕೊಟ್ಟಿರುವುದಕ್ಕೂ ಖರ್ಚು ಆಗುತ್ತಿರುವ ರೀತಿಗೂ, ಯಾವ ಯಾವುದಕ್ಕೆ ಏನೇನು ಸಂಬಂಧಪಟ್ಟದ್ದು ಎಂದು ಪರಿಶೀಲನೆ ಮಾಡಿದ್ದಾರೆಯೇ ಎನ್ನುವುದು ಮುಖ್ಯವಾದ ಪ್ರಶ್ನೆ. ಹಾಗೆ ನಡೆದಿಲ್ಲ. ಇದರಲ್ಲಿ ಇನ್ನೊಂದು ವಿಷಯ. ಹಣವನ್ನು ಕೊಟ್ಟಿರುವುದು ಯಾವಾಗ, ಕೇಳುತ್ತ ಇರುವುದು ಯಾವಾಗ, ಹಣ ಖರ್ಚಾಗುತ್ತಿದೆಯೇ, ಖರ್ಚಾಗಿದೆಯೇ, ಈ ಪ್ರಶ್ನೆಗಳನ್ನೆಲ್ಲ ತಾವು ವಿಚಾರ ಮಾಡಬೇಕು.

ಅಧ್ಯಕ್ಷರು.—ನಿನ್ನೆ ಜವಾಬು ಕೊಡುವಾಗ ಹೇಳಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ನವಂಬರು ತಿಂಗಳಿನಲ್ಲಿ ಕಂಟೈಜೆನ್ಸಿಯಿಂದ 14 ಲಕ್ಷ ರೂಪಾಯಿ ಕೊಟ್ಟೆವು ಎಂದು ಹೇಳುತ್ತಾರೆ. ಇದರಲ್ಲಿ ರಸ್ತೆಗಳನ್ನು, ಹೊಸ ರಸ್ತೆಗಳನ್ನು ಮಾಡುವಾಗ ಮಳೆಗಾಲವನ್ನು (monsoons) ಗಮನದಲ್ಲಡಬೇಕು. ಮತ್ತು ಮಾರ್ಚಿ ಮಾಹೆಯನ್ನೂ ಗಮನದಲ್ಲಿಟ್ಟು ಕೊಂಡು ಕೆಲಸ ಮಾಡಬೇಕು. ಮಾರ್ಚಿ ತಿಂಗಳಿನಲ್ಲಿ ಗ್ರಾಂಟುಗಳು ಲ್ಯಾಪ್ಸ್ ಆಗುತ್ತವೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ. ಮಳೆಗಾಲ ಯಾವಾಗ ಮುಗಿಯುತ್ತದೆ ಎಂದು ಗೊತ್ತಿದೆ. ಕೆಲಸಗಳ ಅಂದಾಜುಗಳನ್ನು ತಯಾರಿಸಿ ಅವುಗಳು ಮಂಜೂರಾಗಲು ಎಷ್ಟು ಕಾಲಬೇಕು ಎನ್ನುವುದೆಲ್ಲ ಗೊತ್ತಿದ್ದ ಮೇಲೆ ಈ ತರಹ ನಾಟಕ ಯಾಕೆ ಮಾಡಬೇಕು ? ಪ್ರತಿ ವರ್ಷವೂ ಗ್ರಾಂಟ್‌ಗಳು ಲ್ಯಾಪ್ಸ್ ಆಗತಕ್ಕ ಪರಿಸ್ಥಿತಿ ಇದೆ. ಪತ್ರಿಕೆಗಳವರು ಮಾತ್ರ ದೊಡ್ಡ ಅಕ್ಷರಗಳಲ್ಲಿ ಹಳ್ಳಿಗಾಡಿನ ರಸ್ತೆಗಳಿಗೆ 14 ಲಕ್ಷ ರೂಪಾಯಿಗಳನ್ನು ಮೈಸೂರು ಸರ್ಕಾರದವರು ಕೊಟ್ಟಿದ್ದಾರೆಂದೂ, ಕುಡಿಯುವ ನೀರಿನ ವ್ಯವಸ್ಥೆಗಾಗಿ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದೂ ಬರೆಯುತ್ತಾರೆ. ಜನರು ಇಂಥ ಸಮಾಚಾರಗಳನ್ನು ಓದಿ, ಸರ್ಕಾರದವರು ಇಷ್ಟು ಹಣವನ್ನು ಗ್ರಾಮಾಂತರ ಪ್ರದೇಶಗಳಿಗೆ ಒದಗಿಸಿ ಕೊಟ್ಟಿದ್ದಾರೆ ಎಂದು ಸಂತೋಷಿಸುತ್ತಾರೆ. ಆದರೆ ಈ ಹಣ ಏನಾಯಿತು, ಖರ್ಚಾಯಿತೇ, ಲ್ಯಾಪ್ಸ್ ಆಯಿತೇ ಎನ್ನುವುದು ಅವರಿಗೆ ತಿಳಿಯುವುದಿಲ್ಲ. ಪತ್ರಿಕೆಗಳವರು ಹಣ ಲ್ಯಾಪ್ಸ್ ಆಗಿರುವ ವಿಷಯವನ್ನು ತಮ್ಮ ಪತ್ರಿಕೆಗಳಲ್ಲಿ ಹಾಕುವುದೇ ಇಲ್ಲ.

ಅಧ್ಯಕ್ಷರು.—ಪ್ರತಿ ವರ್ಷದ ಬಡ್ಜೆಟ್ಟಿನ revised estimates ನಲ್ಲಿ ಎಷ್ಟು ಹಣ ಲ್ಯಾಪ್ಸ್ ಆಗಿದೆ ಎಂದು ಕೊಡುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಪತ್ರಿಕೆಗಳವರು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಹಳ್ಳಿಗಾಡಿನ ರಸ್ತೆಗಳಿಗೆ 14 ಲಕ್ಷ ರೂಪಾಯಿನಲ್ಲಿ ಇಷ್ಟು ಲಕ್ಷ ರೂಪಾಯಿ ಲ್ಯಾಪ್ಸ್ ಆಗಿದೆ ಎಂದು ಹಾಕಲು, ಇದು ಬಹಳ ಸಣ್ಣ ವಿಷಯವೆಂದು ಬಿಡುತ್ತಾರೆ.

ನ್ಯಾಯವಾದ ಕೆಲಸಗಳಿಗೆ ಸ್ವಲ್ಪ ಹಣ ಕಡಿಮೆ ಬೀಳುತ್ತದೆ; ಅದಕ್ಕೆ ಹಣವನ್ನು ಅಪ್ರೋಪ್ರಿಯೇಟ್ ಮಾಡುವುದು ಸಹಜ. ಆದರೆ ಎಲ್ಲಕ್ಕೂ ಅಡಿಷನಲ್ ಗ್ರಾಂಟ್‌ನಿಂದಲೇ ತೆಗೆದುಕೊಂಡು ಮಾಡಬಾರದು ಎಂದು ಹೇಳುತ್ತೇನೆ. 25 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಸರ್ಕಾರ ಕಾಸಿಗೆ ಕಾಸಿಗೆ ಲೆಕ್ಕ ಹಾಕಿಕೊಂಡು ಬಡ್ಜೆಟ್ಟನ್ನು ತಯಾರು ಮಾಡುವುದು ಕಷ್ಟ. ಎಷ್ಟೋ unforeseen expenditure ಬರುತ್ತದೆ. ಆದರೆ ಇದರ ದುರುಪಯೋಗ ಹಾಗಾಗಬಾರದು. ಇದನ್ನು ಕೊಡುವ ವಿಷಯದಲ್ಲಿ ನಮಗಾಗಲಿ, ಶ್ರೀ ರಾಜಶೇಖರಮೂರ್ತಿಗಳು, ಮತ್ತು ಇತರರಿಗಾಗಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಇದರಲ್ಲಿ ಅಡಕವಾಗಿರುವ ನೀತಿ ಸರಿಯಾದುದಲ್ಲ. ಇಂಥ ಗ್ರಾಂಟುಗಳನ್ನು ಈ ರೀತಿ ಮಾಡತಕ್ಕದ್ದು ನ್ಯಾಯವಲ್ಲ. ಇದರಲ್ಲಿ ಬಹಳ ತಡವಾಗಿರುವುದೂ ಒಂದು ವಿಷಯ. ಇದರಲ್ಲಿ ಹಣವನ್ನು ಯಾರು ಖರ್ಚು ಮಾಡಬೇಕು ಯಾವ ರೀತಿ ಖರ್ಚು ಮಾಡಬೇಕು ಎಂದು ನಿರ್ಧರಪಡಿಸಿಲ್ಲ. ಹಣವನ್ನು ತಡವಾಗಿ ಅಂದರೆ ಈ ದಿನ ಮಾರ್ಚಿ 14 ರಲ್ಲು ಕೊಟ್ಟಿರುವುದು. ಇನ್ನು 15 ದಿನಗಳಲ್ಲಿ ಇಷ್ಟು ಹಣವೂ ಖರ್ಚಾಗಬೇಕು ಎಂದರೆ ಅದು ಸಾಧ್ಯವಾಗಲಾರದು. ಹಿಂದೆ ಅಪ್ರೋಪ್ರಿಯೇಷನ್ ಮನೂದೆ ಬಂದಾಗ, ಅಡಿಷನಲ್ ಗ್ರಾಂಟ್ಸ್ ಬಂದಾಗ ಅನೇಕ ಸಾರಿ ಇದೇ ವಿಷಯವನ್ನು ಒತ್ತಿ ಒತ್ತಿ ಹೇಳಿದ್ದೇವೆ.. ಆದರೂ ಸಹ ಸರ್ಕಾರ ತನ್ನ ನೀತಿಯನ್ನು ಸ್ವಲ್ಪವೂ ತಿದ್ದಿಕೊಂಡಿಲ್ಲ. ಹಣಕಾಸಿನ ವಿಷಯದಲ್ಲಿ ಎಷ್ಟರಮಟ್ಟಿಗೆ ಹೆಚ್ಚಿನ ಮುತುವರ್ಜಿ

ಯನ್ನೂ ಲಕ್ಷ್ಯವನ್ನೂ ಕೊಟ್ಟು ಕೆಲಸ ಮಾಡಬೇಕೋ ಅಷ್ಟು ಮಟ್ಟಿಗೆ ನಡೆಯುತ್ತಿಲ್ಲ. ಇದು ಬಹಳ ವಿಷಾದವಾದ ವಿಷಯ.

ಇನ್ನು ಕೊನೆಯಲ್ಲಿ ಒಂದು ಐಟಂ ಸೇರಿಸಿದ್ದಾರೆ. ಅದರಲ್ಲಿ ಹೀಗೆ ಹೇಳಿದ್ದಾರೆ:

"In pursuance of the decision taken by the Small Scale Industries Board, Government of India, to form Industrial Estates, it is proposed to form one in Mysore with a view to provide adequate amenities to such of those who are desirous of starting or developing Industries. A loan of Rs. 10 lakhs is expected from the Central Small Scale Industries Board. Hence the demand." ಇದು ಅಡಿಷನಲ್ ಗ್ರಾಂಟ್‌ನಲ್ಲಿ ತರತಕ್ಕ ಬಾಬು ಅಲ್ಲ ವೆಂದು ಎಲ್ಲರಿಗೂ ಗೊತ್ತಿದೆ. ಇದನ್ನು ಯಾಕೆ ಹಾಕಿದ್ದಾರೆಂಬ ಒಳಗುಟ್ಟು ಗೊತ್ತಾಗಲಿಲ್ಲ. ನಾವು ಬಜೆಟ್ ಅಧಿವೇಶನದಲ್ಲಿದ್ದೇವೆ. ಆಕ್ಸ್‌ಬರು ಮಾಹಿಯಲ್ಲಿ ಆಗಿದ್ದರೆ, I could anticipate and understand such a demand. ಯಾವ ಯಾವುದೋ Small scale Industries Board ತೀರ್ಮಾನಮಾಡಿದೆ ಎಂದೂ, ಮೈಸೂರಿನಲ್ಲಿ Industrial estate ಎಂದು ಏನೋ ಒಂದನ್ನು ಮಾಡಬೇಕೆಂದು ತೀರ್ಮಾನ ಮಾಡಿದೆ ಎಂದೂ ಅದರಲ್ಲಿ 10ಲಕ್ಷ ರೂಪಾಯಿಗಳನ್ನು ಕೇಂದ್ರಸರ್ಕಾರದ ಸಣ್ಣಕೈಗಾರಿಕೆಗಳ ಬೋರ್ಡ್‌ನವರು ಕೊಡುವ ಸಂಭವವಿದೆಯೆಂದೂ, ಆ ಸಂಭವದ ಪ್ರಕಾರ ನಾವೂ 10 ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿರಬೇಕು ಎಂದೂ ಹೇಳುತ್ತಾರೆ. ಅವರ ಪಾರ್ಟಿಯವರ ಮೆಜಾರಿಟಿಯಲ್ಲಿರುತ್ತಾರೆ, ಇದು ಸೂಕ್ತವಲ್ಲವೆಂದರೂ ಶ್ರೀ ವೆಂಕಟಪ್ಪನವರು ಇತರರೂ Vote ಮಾಡುತ್ತಾರೆ. ಅದುದರಿಂದ ಇದು ಪಾಸ್ ಆಗಬೇಕೇ ಹೊರತು ಇದಕ್ಕೆ ಯಾವ ವಿಚಾರದ ಹಿನ್ನೆಲೆಯೂ, ಬೆಂಬಲವೂ ಇರುವುದಕ್ಕೆ ಸಾಧ್ಯವಿಲ್ಲ. ಯಾಕೆಂದರೆ ಈ ಇಂಡಸ್ಟ್ರಿಯಲ್ ಎಸ್ಟೇಟ್ ಎಲ್ಲ, ಯಾರು, ಯಾವರೀತಿ, ಯಾತಕ್ಕೆ ಹೀಗೆ ಮಾಡುತ್ತಾರೆ? ಇಂಡಸ್ಟ್ರಿಯಲ್ ಎಸ್ಟೇಟ್ ಎಂದರೆ ಭೂಮಿಯನ್ನು ತೆಗೆದುಕೊಂಡು ಸಣ್ಣಸಣ್ಣ ಕೈಗಾರಿಕೆ ಮಾಡುವುದೇ? ಕೈಗಾರಿಕೆಗಳಿಯವ ಕಡೆ ಎಸ್ಟೇಟ್ ಎಂದು ಕರೆದು ಸಹಾಯ ಮಾಡುವುದೇ! ಏನು! ಸರ್ಕಾರದವರ ಹತ್ತಿರ ಇದಕ್ಕೆ ಸಂಬಂಧಿಸಿದ ಬ್ಲೂಪ್ರಿಂಟ್ಸ್ ಇರಬಹುದೋ ಏನೋ ಅಥವಾ Small scale Industries Board ನವರ ಹತ್ತಿರ ಇರಬಹುದೋ ಏನೋ. ಇದು Government levelನಲ್ಲಿ ಚರ್ಚೆಯಾಗಿದೆಯೋ ಇಲ್ಲವೋ ಗೊತ್ತಿಲ್ಲ ಅದುದರಿಂದ ಈ ರೀತಿ ಇದು ಒಂದು ಯೋಜನೆಗೆ ಸಂಬಂಧಪಟ್ಟದ್ದಾಗಿರುತ್ತದೆ. ಸುಮ್ಮನೆ ಒಂದು ಸಾಲಕೊಟ್ಟು ಕೈಬಿಡುವುದಲ್ಲ. ಪಾಂಚವಾರ್ಷಿಕ ಯೋಜನೆಯಾಗಲಿ ಅಥವಾ ಇನ್ನು ಯಾವುದಾದರೂ ಯೋಜನೆಯಾಗಲಿ ಕೈಗಾರಿಕೆಗೆ ಯಾಕೆ ಸಂಬಂಧಪಡುತ್ತದೆ ಎಂದು ಅರ್ಥಮಾಡಿಕೊಳ್ಳಬಹುದು. ಅಂಥ ಒಂದು ಕೈಗಾರಿಕೆ ವಿಷಯದಲ್ಲಿ ಯಾವ ರೀತಿ ಪರಿಶೀಲನೆಯನ್ನೂ ಮಾಡಿಲ್ಲವೆಂದು ಕಾಣುತ್ತದೆ. ಇಂಡಸ್ಟ್ರಿಯರ್ ಎಸ್ಟೇಟನ್ನು ಮೈಸೂರಿನಲ್ಲಿ ಪ್ರಾರಂಭ ಮಾಡೋಣವೇ! ಈ ಯೋಜನೆಯನ್ನು ಇಲ್ಲಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ನಡೆದಿದೆಯೇ? ಪ್ರಾರಂಭ ಮಾಡುವುದಾದರೆ ಎಲ್ಲಿ ಮಾಡೋಣ! ಎಲ್ಲಿ ಮಾಡಿದರೆ ಅನುಕೂಲ ಇವನ್ನೆಲ್ಲ ಪರಿಶೀಲನೆಮಾಡಬೇಕು. ಇದರ ಸಾಧಕ ಬಾಧಕಗಳನ್ನು ನೋಡಬೇಕು. ಯಾಕೆಂದರೆ 10 ಲಕ್ಷ ರೂಪಾಯಿಗಳನ್ನು ಕೊಡಬೇಕು ಎಂದು ಕೇಳಿದ್ದಾರೆ. ನಾವು "ಯೇ" ಅಂದರೂ ನಡೆಯುತ್ತದೆ "ನೇ" ಅಂದರೂ ನಡೆಯುತ್ತದೆ. ಅವರ ಪಾರ್ಟಿ ಬಹುಮತವಿರುವುದರಿಂದ ಎಲ್ಲವೂ ಪಾಸ್ ಆಗುತ್ತದೆ. ಈ ಸಂದರ್ಭದಲ್ಲಿ, ಬಜೆಟ್ ಅಧಿವೇಶನ ನಡೆಯುತ್ತ ಇರುವಾಗ ಯಾವುದನ್ನೂ ಪರಿಶೀಲನೆ ಮಾಡದೆ ಈಗ ಕೇಳಿರತಕ್ಕ ಹತ್ತು ಲಕ್ಷ ರೂಪಾಯಿಗಳನ್ನು ಹೇಗೆ ಕೊಡುವುದಕ್ಕೆ ಆಗುತ್ತದೆ! ಅದುದರಿಂದ ಇಂಥ ಬಾಬುಗಳನ್ನು ಈ ಅಪ್ರೊಪ್ರಿಯೇಷನ್ ಮಸೂದೆಯಲ್ಲಿ ಸೇರಿಸಿರುವುದರಲ್ಲಿ ಯಾವ ಅರ್ಥವೂ ಇಲ್ಲ ಮತ್ತು ಇದಕ್ಕೆ ಸಮಂಜಸವಾದ ಯಾವ ಉತ್ತರವನ್ನೂ ಸರ್ಕಾರದವರು ಕೊಡುವುದಕ್ಕೆ ಸಾಧ್ಯವಿಲ್ಲ. ಈರೀತಿ ಹಣವನ್ನು ಕೇಳುವುದು ಮೊದಲೆ ನಿಂದಲೂ ಸರ್ಕಾರದ ಸ್ವಭಾವವಾಗಿ ಬಂದಿದ್ದರೂ ಕೂಡ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಹಣಕಾಸಿನ ವಿಷಯದಲ್ಲಿ ಸರಿಯಾಗಿ ವರ್ತಿಸತಕ್ಕದ್ದು ನೂಕ್ಕ. ತಾವು ಕೊನೆಯ ವರ್ಷದಲ್ಲಿದ್ದೆವೆ, ಹೇಗಾದರೂ ಕಾಲ ಕಳೆಯಬಹುದು ಎಂದು ಹೇಳಬಹುದು. ಆದರೆ ಸರ್ಕಾರ ಎನ್ನುವ ಒಂದು ಯಂತ್ರವಿದೆಯಲ್ಲ ಅದು ಇದನ್ನೆಲ್ಲ ಮಾಡುತ್ತಿದೆ. ಆ ಯಂತ್ರ ಇಂಥದನ್ನೆಲ್ಲವನ್ನೂ ಗಮನಿಸಬೇಕು. ಕಾಲಕ್ಕೆ ಸರಿಯಾಗಿ ನಡೆಯಬೇಕು. ಇಲ್ಲ ಸಮಂಜಸವಾದ ಉತ್ತರ ಸರ್ಕಾರದಿಂದ ಬರಬೇಕು. Explanatory note ಹಾಕುತ್ತಾರಲ್ಲ ಅಷ್ಟು ಮಾತ್ರ ಸಾಲದು. ನಮ್ಮ ಜನಗಳಿಗೆ ಈ ಸಣ್ಣ Explanatory note ತಿಳಿದುಕೊಂಡು "ಯೆ" ಅಥವ "ನೇ" ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇದು ಹಳ್ಳಿಯ ಜನಗಳಿಗೆ ತಿಳಿಯುವುದಿಲ್ಲ. ನೀವು ಹತ್ತು ಲಕ್ಷರೂಪಾಯಿ ಯಾಕೆ ಕೊಟ್ಟಿರಿ ಎಂದು ಕೇಳುತ್ತಾರೆ. ಆಗ ನಾವುಗಳು "ನೇ" ಎಂದು ಹೇಳಿದರೂ ಕೂಡ ತೆಗೆದುಕೊಂಡರು ಎಂದು ಹೇಳಿದರೂ ಸಹ ನೀವು ಕೊಡಬಾರದಾಗಿತ್ತು, ಎಂದು ಹೇಳುತ್ತಾರೆ.

ಆದುದರಿಂದ ಸರ್ಕಾರದವರಿಗೆ ನಾನು ಹೇಳುತ್ತೇನೆ: ಮಂತ್ರಿಗಳು ಏನು ಹೇಳಿದರೆ ಅದನ್ನು ಮಾಡುತ್ತಾರೆ. ಸರ್ಕಾರದ ಯಂತ್ರವೆನ್ನುವುದು ಕೂಡ ಕಾಲದ ವಿದ್ಯಮಾನವನ್ನು ಅರ್ಥಮಾಡಿಕೊಂಡು ಆಯವ್ಯಯದ ಅಂದಾಜನ್ನು ತಯಾರು ಮಾಡುವುದರಲ್ಲಿ, ಹಣ ಲ್ಯಾಪ್ಸ್ ಆಗುವ ವಿಷಯದಲ್ಲಿ, ಸಪ್ಲಿಮೆಂಟರಿ ಗ್ರಾಂಟ್ಸ್ ಕೇಳುವಾಗ, ಸ್ವಲ್ಪ ವಿಚಾರಮಾಡಿ ನ್ಯಾಯವಾದ ರೀತಿಯಲ್ಲಿ, ಎಲ್ಲರಿಗೂ ಸಮಂಜಸವಾದ ರೀತಿಯಲ್ಲಿ ಮಾಡಬೇಕು. ಪಾಲಿಸಿಗೆ ಅವರು ಜವಾಬ್ದಾರರಲ್ಲ. ಆದರೆ ಹಣ ಕಾಸಿನ ವ್ಯವಸ್ಥೆ ಮಾಡುವಾಗ ಹೇಳಬೇಕು. ಬಜೆಟ್ ಸೆಷನ್ ಬಂತು; ಬಜೆಟ್ ಮಾಡಿ, ಇಂಡಸ್ಟ್ರಿಯಲ್ ಎಸ್ಟೇಟ್ ಎಂದರೆ ಏನು, Small-scale Industries Boardಗೆ ನಾವು ಹಣ ಕೊಡಬೇಕೆ, ಎಂಬುದನ್ನೆಲ್ಲ ವಿಧಾನಸಭೆಯಲ್ಲಿ ಇಟ್ಟು ವಿಚಾರ ಮಾಡೋಣ ಎಂದು ಹೇಳಬೇಕಾಗಿತ್ತು. ಬೋರ್ಡಿನವರು 10ಲಕ್ಷ ರೂಪಾಯಿಗಳನ್ನು ಕೊಟ್ಟರೆ, ಬಜೆಟ್ ಅಧಿವೇಶನ ಮುಗಿಯುವುದರೊಳಗೆ ಅದು ಬಂತು ಎಂದರೆ, ಆಗ ಏನಾದರೂ ಮಾಡೋಣ ಎಂದು ಹೇಳಬೇಕಾಗಿತ್ತು. ಈ ಅಪ್ರೊಪ್ರಿಯೇಷನ್ ಮಸೂದೆಯಲ್ಲಿ ಇದನ್ನು ಯಾಕೆ ಸೇರಿಸಬೇಕಾಗಿತ್ತು? ಆದುದರಿಂದ ಇಂಥ ವಿಷಯಗಳಿಗೆ ಸರ್ಕಾರದವರು ಅವಕಾಶ ಕೊಡಬಾರದು. ಅದನ್ನು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡಬೇಕು ಎನ್ನುವ ಕಾರಣಗಳಿಗಾಗಿ ಇದರಲ್ಲಿ ಅನೇಕ ಲೋಪದೋಷಗಳಾಗಿವೆ. ಇಂಥ ಬಾಬಿನ

(ಶ್ರೀ ಎಸ್. ಗೋಪಾಲಗೌಡ)

ಬಗ್ಗೆ ಸಾಕಷ್ಟು ವಿವರಣೆಯನ್ನು ಸರ್ಕಾರದವರು ಕೊಟ್ಟಿಲ್ಲ. ಮತ್ತು ಕೆಲವು ಬಾಬುಗಳು ಇದರಲ್ಲಿ ಅನಾವಶ್ಯಕವಾಗಿ ಸೇರಿಸಲ್ಪಟ್ಟಿವೆ. ಆದುದರಿಂದ ಇಂಥ ಮನೂದೆಯನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಅನಿವಾರ್ಯವಾಗಿ, ವಿಧಿ ಇಲ್ಲದೆ ಅದು ಪಾಸ್ ಆಗಿ ಹೋಗುತ್ತದೆ. ಇದರ ಪೂರ್ಣ ಜವಾಬ್ದಾರಿ ಸರ್ಕಾರದ್ದೇ ಇರುತ್ತದೆ ಎಂದು ಹೇಳಿ ಈ ಮನೂದೆಗೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಸ್ವಾಮಿ, 26ನೆ ಡಿಮ್ಯಾಂಡಿನಲ್ಲಿ 1,92,200 ರೂಪಾಯಿಗಳ ಅಡಿಷನಲ್ ಗ್ರಾಂಟ್ ಬೇಕು ಎಂದು ಕೇಳಿರುವುದಕ್ಕೆ ಸಮಂಜಸವಾದ ಉತ್ತರವನ್ನು ಸರ್ಕಾರದವರು ಕೊಡಲಿಲ್ಲವೆಂದು ಶ್ರೀ ಗೋಪಾಲಗೌಡರು ತಿಳಿಸಿದರು. ಮತ್ತೆ Messrs. W. J. Bush & Co., New York, ಇವರುಗಳಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ತಿಳಿಸಿದ ಮೇಲೆ, ಸ್ವಲ್ಪ ಟೀಕೆ ಟಿಪ್ಪಣಿ ಮಾಡಿದರು. ಬಹುಶಃ ಈಗ ವಿವರಣೆ ಕೊಟ್ಟಮೇಲೆ ಅವರ ಟೀಕೆ ಟಿಪ್ಪಣಿಗಳನ್ನು ವಾಪಸು ತೆಗೆದುಕೊಂಡು ಈ ಮನೂದೆಗೆ ಸಂಪೂರ್ಣ ಬೆಂಬಲ ಕೊಡುತ್ತಾರೆ ಎಂಬ ನಂಬಿಕೆ ನನಗಿದೆ. ನಾಲ್ಕು ವರ್ಷಗಳಿಂದ ಕಂಪೆನಿಯವರೊಂದಿಗೆ ಒಪ್ಪಂದ ಮಾಡಿಕೊಳ್ಳಲಲ್ಲವೆಂಬುದು ನಿನ್ನೆ ಯದಿವಸ ಅಕಸ್ಮಾತ್ ನಾನು ಹೇಳಿದ್ದರಿಂದ ಗೊತ್ತಾಯಿತೆಂದು ಸೂಚಿಸಿದರು. "For the payment of part of the arrears of distribution charges and sales commission to Messrs. W. J. Bush & Co." ಎಂದು ವಿವರಣೆ ಕೊಟ್ಟಿದೆ. ನಮ್ಮಾರು ಆರು ಲಕ್ಷ ರೂಪಾಯಿಗಳವರೆಗೆ ನಾವು ಅವರಿಗೆ ಕೊಡಬೇಕಾದ ಹಣವನ್ನು ಡಿವಾಜಿಟ್ಟಿನಲ್ಲಿ ಇಟ್ಟುಕೊಂಡಿದ್ದೆವು, ಆದ್ದರಿಂದ ಸೆಕ್ಯೂರಿಟಿಯಿಲ್ಲದೆ ಅವರ ಹತ್ತಿರ ವ್ಯಾಪಾರಮಾಡುತ್ತಿರಲಿಲ್ಲ. ತಮ್ಮ ಅಪಾದನೆಯೇನಿದೆ ಅಥವಾ ಅನುಮಾನವೇನಿದೆ ಅದಕ್ಕೆ ಎಡೆಯಿಲ್ಲ ಎಂದು ನಿನ್ನೆಯ ವಿವಸ ನಾನು ಶ್ರೀನಿವಾಸಯ್ಯಂಗಾರ್‌ರವರ ಪ್ರಶ್ನೆಗೆ ಉತ್ತರಕೊಟ್ಟೆ. ಒಪ್ಪಂದಮಾಡಿಕೊಳ್ಳಲಲ್ಲವೆಂಬುದು ಒಂದು ಆಕ್ಷೇಪಣೆ. 1949ರಲ್ಲಿ ಅವರ ಅಗ್ರಿಮೆಂಟ್ ಅವಧಿ ಪೂರೈಸಿತು. ಅದರಲ್ಲೂ ವ್ಯಾಪಾರ ಧರ್ಮದಲ್ಲಿ ಉಭಯತ್ರರ ಒಂದು ಸಂಬಂಧವನ್ನು ಕಲ್ಪಿಸುವ ಅಗ್ರಿಮೆಂಟ್ ಆಗಬೇಕು. ಆ ಕಂಪೆನಿಯವರು ಬಹಳ ವರ್ಷಗಳಿಂದ ನಮ್ಮ ಏಜೆಂಟರಾಗಿದ್ದರು ಮತ್ತು ಅಮೆರಿಕಾದಲ್ಲಿ ಖರ್ಚಾಗುವ ವಿಶಿಷ್ಟ ಎಣ್ಣೆಯೂ ಅಲ್ಲಿಯೇ ತಯಾರಾಗುತ್ತದೆ. ಆದ್ದರಿಂದ ಅವರು ಎರಡು ಕೆಲಸಗಳನ್ನು ಮಾಡುತ್ತಿದ್ದಾರೆ: ಒಂದನೆಯದು ಎಣ್ಣೆ ತೆಗೆಯುವುದು, ಎರಡನೆಯದು ತೆಗೆದ ಮೇಲೆ ನಮ್ಮ ಏಜೆಂಟರಾಗಿ ಮಾರಾಟ ಮಾಡುವುದು. ಅದೊಂದು ಹೆಸರುವಾಸಿಯಾದ ಕಂಪನಿ. ನಾವು ಲಕ್ಷಾಂತರ ರೂಪಾಯಿಗಳ ವ್ಯಾಪಾರ ಮಾಡುವಾಗ ಸಾಮಾನ್ಯವಾಗಿ ಗುಡ್‌ವಿಲ್ ಎಂಬುದೇ ನಿದೆಯೋ ಅದರ ಮೇಲೆ ವ್ಯವಹಾರ ಮಾಡುವುದು ಸೂಕ್ತವೆಂದು ತಾವು ಒಪ್ಪುತ್ತೀರಿ. ನಾವು ದೂರ ದೇಶದಲ್ಲಿ ವ್ಯಾಪಾರ ಮಾಡುವಾಗ ಸಮರ್ಪಕವಾಗಿ ಕೆಲಸ ಮಾಡುತ್ತಿರುವ ಇಂಥ ದೊಡ್ಡ ಕಂಪೆನಿಯ ಸಂಬಂಧ ಕಳೆದುಕೊಳ್ಳಬಾರದು. ಬೇರೆಯವರಿಗೆ ವಹಿಸುವುದು ಅಷ್ಟು ಸುಲಭವಲ್ಲ. ಏಕೆಂದರೆ ಅದರಂತೆ ಅದೇ ದರ್ಜೆಯಲ್ಲಿ ಆ ಕನಬನ್ನು ಮಾಡುವವರು, ಎಣ್ಣೆ ತೆಗೆದು ಮಾರಾಟ ಮಾಡುವವರು ದೊರೆಯಬೇಕು. ಆದ್ದರಿಂದ ಹಿಂದಿನ ಒಪ್ಪಂದದ ಪ್ರಕಾರ ನೀವು ಕೆಲಸ ಮಾಡಬೇಕು, ಸೆಕ್ಯೂರಿಟಿ ಕೊಡಬೇಕು, ವ್ಯವಹಾರ ನಡೆಸಬೇಕು ಎಂದು ಪತ್ರವ್ಯವಹಾರ ನಡೆಸಿದೆವು. ಅವರು ಈ ಕೆಲಸವನ್ನು ಲಾಭದಾಯಕವಾಗಿ ಮುಂದುವರಿಸುವುದಕ್ಕೆ ಸಾಧ್ಯವಾಗಿಲ್ಲ, ಆದ್ದರಿಂದ ಬೇಡ ಎಂದು ಬರೆದಿದ್ದರು. ಏಕೆ ಹಾಗಾಯಿತೆಂಬುದನ್ನು ಕೇಳಿ ನೀವೇ ಇರಬೇಕೆಂದು ತಿಳಿಸಿ ಆ ಸಂಬಂಧವಾದ ಅವರ ಹಣವನ್ನು ಮುಡುಪಾಗಿಟ್ಟೆವು. ನಿನ್ನೆ ತಿಳಿಸಿದ ಹಾಗೆ ಕಂಪೆನಿಯ ಮಾಲೀಕ ಕಾಲವಾದ. ಆಮೇಲೆ ಯಾರೊಂದಿಗೆ ಅಗ್ರಿಮೆಂಟ್ ಮಾಡಿಕೊಳ್ಳಬೇಕೆಂದು ಯೋಚಿಸುವುದರಲ್ಲಿ ಕೆಲವು ಕಾಲ ಕಳೆಯಿತು. ಆ ಕಂಪೆನಿಯವರು ಒಪ್ಪಂದ ಮಾಡಿಕೊಳ್ಳುತ್ತೇವೆಂದು ಒಪ್ಪಿದ ಮೇಲೆ ಅಗ್ರಿಮೆಂಟ್ ಹೇಗೆ ಬರಬೇಕೆಂಬುದನ್ನು ಲಾ ಇಲಾಖೆಯವರಿಂದ ಪರೀಕ್ಷಿಸಿದ್ದೇವೆ. ಸರ್ಕಾರಕ್ಕೆ ಯಾವ ವಿಧವಾದ ಅನಾನುಕೂಲವೂ ಆಗದ ಹಾಗೆ, ಸರ್ಕಾರದ ಹಣಕ್ಕೆ ಲೋಪ ಬಾರದ ಹಾಗೆ, ನಮ್ಮ ಹಿತರಕ್ಷಣೆಯಾಗುವಂತೆ ಅವರಿಗೆ ಕೊಡ ಬೇಕಾದ ಹಣವನ್ನು ನಮ್ಮಲ್ಲೇ ಇಟ್ಟುಕೊಂಡು ಹಿಂದಿನ ಒಪ್ಪಂದದ ಪ್ರಕಾರ ವ್ಯವಹಾರ ನಡೆಯುತ್ತಿದೆ. ಆದ್ದರಿಂದ ಆ ವಿಷಯದಲ್ಲಿ ಅನುಮಾನ ವೇನು ವ್ಯಕ್ತಪಡಿಸಿದರೋ ಅದಕ್ಕೆ ಎಡೆಯಿಲ್ಲ.

ಎರಡನೆಯದಾಗಿ ಡೋಗ್ಲಾಸ್ ಕಂಪನಿಯ ಬಿಲ್ಲುಗಳಿಗೆ ಹಣ ಪಾವತಿ ಮಾಡಿಲ್ಲ, ಅದು ಸರ್ಕಾರದ ಗಾಂಭೀರ್ಯಕ್ಕೆ ಕುಂದುಕವನ್ನುಂಟುಮಾಡಿದೆ ಎಂದು ಹೇಳಿದರು. ಅಷ್ಟು ಪರಿತಾಪ ಪಡುವ ಸನ್ನಿವೇಶ ವೇನೂ ಇಲ್ಲ. ನಾವು ಎಣ್ಣೆಯನ್ನು ಸರಬರಾಯಿ ಮಾಡಿದಾಗ ಅವರು ಮಾರಾಟ ಮಾಡುತ್ತಾರೆ. ಅದಕ್ಕೆ ಎಷ್ಟು ಕಮಿಷನ್ ಕೊಡಬೇಕೆಂಬುದಕ್ಕೆ ಅವರು ಸಾಮಾನ್ಯವಾಗಿ ಬಿಲ್ಲನ್ನು ಕಳುಹಿನಬೇಕು; ಅದು ಒಂದು ಪ್ರೂಸೀಜರ್. ನಾವೂ ಕೆಲವು ವೇಳೆ ಬಿಲ್ಲು ಕಳುಹಿಸಿ ಎಂದು ಬರೆಯುತ್ತೇವೆ. ಅವರು ಅವರ ಅನುಕೂಲಕ್ಕಾಗಿ ತಮಗೆ ಬರಬೇಕಾದ ಹಣವನ್ನು ನಮ್ಮಲ್ಲೇ ಬಿಟ್ಟಿದ್ದರು; ಯಾವಾಗಲಾದರೂ ಬಂದೇ ಬರುತ್ತದೆಂಬ ನಂಬಿಕೆಯಿಂದ ಹಣ ಬೇಕಾದಾಗ ತೆಗೆದುಕೊಳ್ಳೋಣವೆಂದು ನಮ್ಮ ಮೇಲೆ ಬಿಟ್ಟಿದ್ದರೇ ವಿನಾ ನಾವು ಕೊಡಬಾರದೆಂಬ ಪ್ರಶ್ನೆಯೇ ಇಲ್ಲ. ಅವರು ಬೇಕಾದಾಗ ಬಿಲ್ಲು ಕಳಿಸಿ ಹಣ ತೆಗೆದು ಕೊಳ್ಳುತ್ತಿರುವುದರಿಂದ ಒಣ ಗಾಂಭೀರ್ಯವೆಂದು ಹೇಳುವುದು ಸರಿಯಲ್ಲ. ನಮ್ಮಲ್ಲಿ ಹಣದ ಅಭಾವ ವೆಂದು ಕೊಡಬೇಕಾದ್ದನ್ನು ಕೊಡದೆ ಬಿಟ್ಟಿಲ್ಲ, ಕೊಡ ಬಾರದೆಂಬ ಪ್ರಶ್ನೆ ಕೂಡ ಇಲ್ಲ. ಈ ವಿಚಾರದಲ್ಲಿ ಒಂದು ಸಂತೋಷವಾದ ವಿಷಯವೇನೆಂದರೆ, ಸರಿಯಾಗಿ ಉತ್ತರ ಕೊಟ್ಟು ಸಂಸ್ಥಾನದ ಆರ್ಥಿಕ ಸ್ಥಿತಿ ಯಾವ ರೀತಿಯಿದೆಯೆಂಬುದನ್ನು ತೋರಿಸಲು ಒಂದು ಅವ ಕಾಶ ಕೊಟ್ಟಿದ್ದು.

ಆಮೇಲೆ ಟ್ರೇಡ್ ಕಮಿಷನರ್ ನೇಮಕದ ವಿಷಯ ಹೇಳಿದರು. ಈ ಡಿಮ್ಯಾಂಡಿನಲ್ಲಿ ಟ್ರೇಡ್ ಕಮಿಷನರಿಗಾಗಿ ಖರ್ಚು ಮಾಡುವ ಹಣ ಸೇರಿಲ್ಲ. ಟ್ರೇಡ್ ಕಮಿಷನರಿಗಾಗಿ ಲಂಡನ್ನಲ್ಲಿ ಖರ್ಚಾಗುವುದಕ್ಕೆ ಹಿಂದೆ ವಿವರಣೆ ಕೊಟ್ಟೆ. ಒಂದು ಲಕ್ಷ ರೂಪಾಯಿಗಳಿಗೆ ವಿವರಣೆ ಕೊಟ್ಟಿದೆ. ಹಿಂದೆ 1,200 ಟನ್ ಎಣ್ಣೆ ತೆಗೆಯುತ್ತಿದ್ದೆವು. ಈ ವರ್ಷ 1,700-1,800 ಟನ್ ಎಣ್ಣೆ ತೆಗೆದು ಹೆಚ್ಚು ಮಾರಾಟವಾದುದರ ಪರಿಣಾಮವಾಗಿ ಹೆಚ್ಚು ಕಮಿಷನ್ ಕೊಡಬೇಕಾಯಿತು. ಅದಕ್ಕೆ 60 ಸಾವಿರ ರೂಪಾಯಿ ಬೇಕಾಯಿತು. ಹೆಚ್ಚು ಮಾರಾಟವಾದುದು 25,500 ರೂಪಾಯಿ, ಅದ್ದ

ಟ್ರೆಸ್‌ಮೆಂಟಿಗೆ 4,500 ರೂಪಾಯಿ, ಸಂಕು ಅಂಡ್ ಕಂಪನಿಗೆ ಕಮಿಷನ್ 15 ಸಾವಿರ ರೂಪಾಯಿ ಕೊಡ ಬೇಕಾಯಿತು. 31 ಲಕ್ಷ ರೂಪಾಯಿಗಳಿಗೆ ನಿನ್ನೆ ವಿವರ ಕೊಟ್ಟಿ. ಅದರ ಮೇಲೆ ಶ್ರೀನಿವಾಸಯ್ಯಂಗಾರ್‌ರವರು ತೃಪ್ತಿಪಟ್ಟರು. ಅದೇ ರೀತಿ ತಮ್ಮ ಮನಸ್ಸಿಗೂ ತೃಪ್ತಿಯಾಗಿದೆಯೆಂಬುದು ನನ್ನ ಭಾವನೆ, ಆದ್ದರಿಂದ ಈ ವಿಷಯದಲ್ಲಿ ಸರ್ಕಾರ ನಿರ್ಲಕ್ಷ್ಯದಿಂದ ಕೆಲಸ ಮಾಡಿಲ್ಲ; ಹೆಚ್ಚಿನ ಆಸಕ್ತಿಯಿಂದ, ದ್ವೇಶದ ಹಿತದೃಷ್ಟಿ ಯಿಂದ, ಹೆಚ್ಚು ಆದಾಯ ಪಡೆಯದೆ ಪ್ರಜೆಗಳ ಪ್ರತಿ ನಿಧಿಗಳು ಅನುಮತಿ ಕೊಟ್ಟಂತೆ ಅವರ ಸುಖ ಸಂತೋಷಕ್ಕಾಗಿ ಖರ್ಚು ಮಾಡಿರುವುದರಿಂದ ಈ ಸಭೆ ಈ ಡಿಮ್ಯಾಂಡ್ ಮನವಿಗೆ ಸಂಪೂರ್ಣ ಬೆಂಬಲ ಕೊಡುತ್ತ ದೆಂದು ನಾನು ನಂಬಿದ್ದೇನೆ.

ರೂರಲ್ ಕಮ್ಯುನಿಕೇಷನ್ ವಿಷಯದಲ್ಲಿ ಮಾನ್ಯ ಗೋಪಾಲಗೌಡರು ಸ್ವಲ್ಪ ಪ್ರಸ್ತಾಪ ಮಾಡಿದರು. ಆರ್ಡರು ಮಾಡಿರುವುದು ಸರಿಯಾಗಿಲ್ಲ, ಹಣ ಕೊನೆ ಕಾಲದಲ್ಲಿ ಬಂದಿದೆ, ಅದು ಖರ್ಚಾಗುವುದು ಬಹಳ ಅಸಂಭವ, ಮೊದಲೇ ಏಕೆ ಕೊಡಬಾರದಾಗಿತ್ತು ಎಂದು ಹೇಳಿದರು. ತಮ್ಮ ಮನಸ್ಸಿನಲ್ಲಿರುವ ಅನು ಮಾನವನ್ನು ಪರಿಹಾರ ಮಾಡಬೇಕಾದದ್ದು ನಮ್ಮ ಕರ್ತವ್ಯ. ಈ ಸಭೆಯ ಮಾನ್ಯ ಸದಸ್ಯರು ಅನೇಕ ವೇಳೆ ಗ್ರಾಮಾಂತರದ ರಸ್ತೆಗಳಿಗೆ ಹಣ ಕೊಟ್ಟಿರು ವುದು ಸಾಲದು, ಹೆಚ್ಚಾಗಿ ಕೊಡಬೇಕು ಎಂದು ಒತ್ತಾಯಪಡಿಸಿದ್ದರ ಮೇಲೆ ಸರ್ಕಾರದವರು ಅದನ್ನು ಸಹಾನುಭೂತಿಯಿಂದ ಪರಿಶೀಲಿಸಿ 14 ಲಕ್ಷ ರೂಪಾಯಿ ಗಳನ್ನು ಗ್ರಾಮಾಂತರದ ರಸ್ತೆಗಳ ಅನುಕೂಲಕ್ಕಾಗಿ ಕೊಡಬೇಕಾಯಿತು. ಜಿಲ್ಲಾ ಬೋರ್ಡ್ ರಸ್ತೆಯಾಗಿರಲಿ ಅಥವಾ ಪಂಚಾಯಿತಿ ರಸ್ತೆಯಾಗಿರಲಿ ಅಥವಾ ಈ ಎರಡಕ್ಕೂ ಸೇರದಿರುವ ರಸ್ತೆಯಾಗಿದ್ದು ಅದು ಜನರಿಗೆ ಉಪಯುಕ್ತವಾಗುವ ಸಂಭವವಿದ್ದರೆ ಅದಕ್ಕೂ, ಹೀಗೆ ಯಾವುದಕ್ಕೆ ಬೇಕಾದರೂ ಹಣ ಕೊಡಬಹುದೆಂದು ವಿಧಾಯಕವಾಗಿದೆ. ಹೊಸರಸ್ತೆ ನಿರ್ಮಾಣಕ್ಕೆ ಅಥವಾ ಇರುವ ಹಳೆಯ ರಸ್ತೆ ರಿಪೇರಿಗೆ ಬೇಕಾದರೂ ಕೊಡ ಬಹುದೆಂದು ವಿಧಾಯಕವಾಗಿದೆ. ಎರಡನೆಯದಾಗಿ ಎಲ್ಲೆಲ್ಲ ಸಾರ್ವಜನಿಕರು ಸ್ವಲ್ಪ ಮುಂದೆ ಬಂದು ಸಹಾಯ ಮಾಡುತ್ತಾರೋ ಮತ್ತು ಪಂಚಾಯಿತಿ ಅಥವಾ ಜಿಲ್ಲಾಬೋರ್ಡ್ ಮುಂದೆ ಬಂದು ಎಲ್ಲಿ ಸಹಾಯ ನೀಡುತ್ತಾರೋ ಅಂಥ ಕಡೆಗೆ ಆ ರೀತಿ ಮುಂದೆ ಬಂದಾಗ ಹೆಚ್ಚು ಪ್ರಾಶಸ್ತ್ಯ ಕೊಡುವುದನ್ನು ಜಿಲ್ಲಾಧಿಕಾರಿಗಳು ಯೋಚನೆ ಮಾಡಬಹುದೆಂದು ಕೂಡ ವಿಧಾಯಕವಾಗಿದೆ. ಯಾವ ರೀತಿ ಕೆಲಸ ಮಾಡಬೇಕೆಂಬುದಕ್ಕೆ ಏನೂ ವಿಧಾಯಕವಾಗಿಲ್ಲ, ಇದೊಂದು ದೊಡ್ಡ ನಾಟಕ, ಪ್ರೊಸೀಜರ್ ಸರಿಯಾ ಗಿಲ್ಲ, ಖಚಿತವಾಗಿಲ್ಲ ಎಂದು ಹೇಳಿದರು. ಅದು ಸರಿ ಯಲ್ಲವೆಂದು ಬಹಳ ವಿನಯದಿಂದ ಸೂಚಿಸುತ್ತೇನೆ. ಆರ್ಡರಿನಲ್ಲಿ ಖಚಿತವಾಗಿದೆ, ಜಿಲ್ಲಾಧಿಕಾರಿಗಳು ಖರ್ಚು ಮಾಡಬೇಕು, ಯಾವಯಾವ ರಸ್ತೆಗಳಿಗೆ ಕೊಡಬೇಕೆಂಬು ದನ್ನು ಜಿಲ್ಲಾಧಿಕಾರಿಗಳು ಸ್ಥಳೀಯ ಜನರನ್ನು ವಿಚಾ ರಿಸಿ ನೊಕ್ತಪಾದುದು ಯಾವುದೆಂದು ಅವರು ನಿರ್ಧಾರ ಮಾಡಬೇಕೆಂದು ವಿಧಾಯಕವಾಗಿದೆ. ಖರ್ಚು ಯಾವ ರೀತಿ ಮಾಡಬೇಕು, ಯಾವ ರಸ್ತೆಗಳಿಗೆ ಮಾಡ ಬೇಕು ಎಂಬುದನ್ನೂ ಸಹ ವಿಧಾಯಕ ಮಾಡಿದೆ, ಮತ್ಯಾವುದನ್ನು ವಿಧಾಯಕ ಮಾಡಿಲ್ಲವೋ ನನಗೆ ಗೊತ್ತಿಲ್ಲ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಯಾವು ದನ್ನು ಮಾಡಿಸಬಹುದು, ರೆವೆನ್ಯೂ ಬಾಬಿನ ಮುಖೇನ ಯಾವುದನ್ನು ಮಾಡಬಹುದು ಎಂಬ ವಿಶಿಷ್ಟ ವಿಷಯ ಗಳೂ ವಿಧಾಯಕವಾಗಿವೆ.

ಯಾರಾರಿಗೆ ಬೇಕೋ ಅವರಿಗೆ ಕೊಟ್ಟರೆಂಬ ಪ್ರಶ್ನೆಯೇ ಇಲ್ಲ. ಈ 14 ಲಕ್ಷ ಮತ್ತು ಹಿಂದಿದ್ದ ಮೂರು ಲಕ್ಷ ಸೇರಿ ಒಟ್ಟು 17 ಲಕ್ಷ ರೂಪಾಯಿಗಳನ್ನು ಸಮನಾಗಿ ಎಲ್ಲರಿಗೂ ಹಂಚಿದೆ. ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಮಂಡ್ಯ, ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳಿಗೆ ಜಿಲ್ಲೆಯೊಂದಕ್ಕೆ ಒಂದೂಮುಕ್ಕಾಲು ಲಕ್ಷದಂತೆಯೂ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ತಲಾ ಒಂದೂವರೆ ಲಕ್ಷ ದಂತೆಯೂ ಹಂಚಿದೆ. ಈ ರಸ್ತೆಯ ಕೆಲಸ ಚೆನ್ನಾಗಿ ನಡೆಯುತ್ತಿದೆಯೆ ಎಂಬ ಅನುಮಾನವಿದೆ, ಒಪ್ಪೋಣ. ಇನ್ನೂ ಎರಡು ತಿಂಗಳ ಮುಂಚೆಯೇ ಹಂಚಿಕೆ ಮಾಡಿ ದ್ದರೆ ಚೆನ್ನಾಗಿತ್ತು ಎಂಬುದನ್ನು ಒಪ್ಪೋಣ. ಈ ಹಣ ಖರ್ಚಾಗಿಲ್ಲ, ಹೆಚ್ಚು ಹಣ ಬೇಕು ಎಂದು ಹೇಳಿದ್ದಾರೆ. ಹಣವಿದ್ದು ಅದು ಖರ್ಚಾಗದಿದ್ದರೆ ಬೇರೆ ಹಣ ಅನಾವ ಶ್ಯಕ. ಈ 14 ಲಕ್ಷ ನಾವು ಕೊಡುವಾಗಲೇ ಸಾಧ್ಯ ವಾದ ಮಟ್ಟಿಗೆ ಅದನ್ನು ಖರ್ಚು ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಕಟ್ಟಾಜ್ಞೆ ಮಾಡಿದೆ ಮತ್ತು ಜಿಲ್ಲಾಧಿಕಾರಿಗಳ ಸಭೆ ಸೇರಿಸಿ ಇಂತಹ ರೀತಿಯಲ್ಲಿ ಇಂತಹ ಕೆಲಸಗಳಿಗೆ ಖರ್ಚು ಮಾಡಿ ಎಂದು ಸೂಚನೆ ಕೊಟ್ಟಿದೆ. ಪ್ರವಾಸ ಮಾಡಿದಾಗ ಕೂಡ ಶಿವಮೊಗ್ಗ, ಹಾಸನ, ಚಿತ್ರದುರ್ಗ, ಮೈಸೂರು, ಮಂಡ್ಯ ಮುಂತಾದ ಕಡೆಗಳಲ್ಲೆಲ್ಲಾ ಸಾರ್ವಜನಿಕರ ಸಹಾಯ ಕ್ಕಾಗಿಯೇ ಈ ಹಣ ಪೂರ್ಣವಾಗಿ ಖರ್ಚು ಮಾಡಬೇ ಕೆಂದು ಹೇಳಿದೆ. ಯಾವ ಊರಿಗೆ ರಸ್ತೆಯಾಯಿತು, ಯಾವ ಊರಿಗೆ ಕಲ್ವರ್ಟ್ ಆಯಿತು ಎಂಬುದು ಮುಖ್ಯ ವಲ್ಲ. ಒಟ್ಟಿನಲ್ಲಿ ಜನರಿಗೆ ಅಗತ್ಯವಾದ ರಸ್ತೆ, ಕಲ್ವರ್ಟ್, ಸೇತುವೆ ಆಗಬೇಕು. ನನಗೆ ಜ್ಞಾಪಕವಿರುವ ಹಾಗೆ ಹಾಸನ ಜಿಲ್ಲೆ ಗಂಡಸಿಯಿಂದ ಬೈರಾಪುರಕ್ಕೆ ಹತ್ತು ಮೈಲಿ ರಸ್ತೆಯನ್ನು ಹತ್ತು ದಿವಸಗಳಲ್ಲಿ ಮಾಡಿ ದ್ದಾರೆ. ಇಷ್ಟು ಮಾಡಿದ್ದರ ಪರಿಣಾಮವಾಗಿ 22 ಸಾವಿರ ರೂಪಾಯಿಗಳ ಖರ್ಚಾಗಿ ಸೇತುವೆ, ರಸ್ತೆ, ಮಗೈರೆ ಆಗಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕೆಲಸ ಮುಗಿಯುತ್ತಾ ಬಂದಿತೆ. ಅದನ್ನು ನೋಡಿ ಸಂತೋಷಪಡಬೇಕೆಂಬ ಆಸೆಯಿದ್ದರೆ ನನ್ನ ಜೊತೆಯಲ್ಲಿ ಬನ್ನಿ, ತೋರಿಸುತ್ತೇನೆ. ಆದ್ದರಿಂದ ಆ ತರಹ ಅನು ಮಾನಕ್ಕೆ ಕಾರಣವಿಲ್ಲ. ಶ್ರೀ ರಾಜಶೇಖರ ಮೂರ್ತಿ ಯವರು ಹೇಳಿದ ಹಾಗೆ ಮೈಸೂರು ಜಿಲ್ಲೆಯಲ್ಲಿ ಬೇಕಾ ದಷ್ಟು ಕೆಲಸವಾಗುತ್ತಿದೆ. ಆದ್ದರಿಂದ ಈ ಬಗ್ಗೆ 14 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಯಾರ ಆಭ್ಯಂತ ರವೂ ಇಲ್ಲವೆಂದು ನಂಬಿದ್ದೇನೆ.

Sri Mulka GOVINDA REDDY.—The fundamental objection is that the House has protested to the curtailment of the 6¼ per cent of the land revenue to the District Boards. Instead of doing that, you are giving some amount in this form.

Sri H. M. CHANNABASAPPA.—It has nothing to do with the giving of money due to the District Boards. This is purely with a view to supplement the resources of not only District Boards and Panchayets but also the resources that are coming forth from the private people in order to improve the roads in the rural areas.

(SRI H. M. CHANNABASAPPA.)

2 P.M.

ಇನ್ನು ಕೊನೆಯದಾಗಿ ಈ ಇಂಡಸ್ಟ್ರಿಯಲ್ ಎಸ್ಟೇಟ್‌ಗಳ ವಿಚಾರದಲ್ಲಿ ನಮಗೇನೂ ಗೊತ್ತೇ ಇಲ್ಲ, ಇದನ್ನು ಯಾರು ಕೇಳಿದ್ದರು, ಇದರಿಂದೇನು ಪ್ರಯೋಜನವಿದೆ, ಇದು ಬಹಳ ಅಪ್ರಯೋಜಕವಾದದ್ದು ಎಂಬುದಾಗಿ ಕೆಲವು ಸದಸ್ಯರು ಮಾತನಾಡಿದ್ದಾರೆ. ನಾನೀಗ ಈ ಮಾನ್ಯ ಸಭೆಗೆ ತಿಳಿಸಬೇಕೆಂದಿರುವುದಿಷ್ಟೆ:—ಮುಂದಿನ ಸಾಲಿನಿಂದ ಈ ದ್ವಿತೀಯ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಈ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಪ್ರಾರಂಭಿಸತಕ್ಕ ಬಗ್ಗೆ ಬಡ್ಜೆಟ್ಟಿನಲ್ಲಿ 50 ಲಕ್ಷ ರೂಪಾಯಿಗಳನ್ನು ಒದಗಿಸಿರುವ ಅಂಶವನ್ನು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದನ್ನು ಮಾನ್ಯ ಸದಸ್ಯರೆಲ್ಲರೂ ತಮ್ಮ ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ ಇಂಥ ಕೈಗಾರಿಕೆಗಳನ್ನು ಪ್ರಾರಂಭಿಸುವುದು ಯೋಗ್ಯವಾದದ್ದೇ ಅಥವಾ ಅಲ್ಲವೇ ಎನ್ನುವುದನ್ನೆಲ್ಲಾ ಈಗಾಗಲೇ ಪರಿಶೀಲನೆ ಮಾಡಿರುತ್ತೇವೆ. ಈ ಯೋಜನೆಯ ಮೂಲಕ ದೇಶಾದ್ಯಂತವೂ ಸಣ್ಣ ಪುಟ್ಟ ಕೈಗಾರಿಕೆಗಳಿಗೆ, ಬಂಡವಾಳ ಕಮ್ಮಿ ಇರತಕ್ಕಂಥ ಉದ್ಯಮಗಳಿಗೆ ಜನರನ್ನು ಪ್ರೋತ್ಸಾಹಿಸಲು ಇದರಿಂದ ತುಂಬ ಅನುಕೂಲವಾಗುತ್ತದೆ. ಆದರೆ ತಮ್ಮಲ್ಲಿ ಸಾಕಷ್ಟು ಬಂಡವಾಳವಿಲ್ಲದೆ ಇಂಥ ಉದ್ಯಮಗಳನ್ನು ನಡೆಸಲು ಶಕ್ತಿ ಸಾಧ್ಯತೆಗಳು ಇಲ್ಲದಂಥ ಜನರಿಗೆ ಇದರಿಂದ ತುಂಬ ಪ್ರೋತ್ಸಾಹ ದೊರೆಯುತ್ತದೆ ಎನ್ನುವ ಸದುದ್ದೇಶದಿಂದಲೇ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಸದ್ಯಕ್ಕೆ ನಮ್ಮ ಭರತಖಂಡದಲ್ಲೇ ಇಂಥಾದ್ದು ಯಾವುದೂ ಇರಲಿಲ್ಲ. ಆದರೆ ಇತ್ತೀಚೆಗೆ ನಮ್ಮ ಭಾರತ ಸರ್ಕಾರದವರು ಇಂಥ ಒಂದು ಹೊಸ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕೆಂದು ಮನಸ್ಸು ಮಾಡಿದ್ದಾರೆ. ಈಗ ಇಂಡಿಯಾದೇಶದಲ್ಲೆಲ್ಲಾ ಇಂಥ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಪ್ರಾರಂಭಿಸಬೇಕೆಂದು ಉದ್ದೇಶಿಸಲಾಗಿದೆ. ಈಗ ಅಲ್ಲಲ್ಲಿ ಇರತಕ್ಕ ಇಂಡಸ್ಟ್ರಿಗಳು ಬಹಳ ಕಷ್ಟದಿಂದ ಮುಂದುವರಿದುಕೊಂಡು ಬರುತ್ತವೆ. ಅವುಗಳಿಗೆ ಬೇಕಾಗಿರುವಂಥ ಕಟ್ಟಡ, ನೀರಿನ ಸರಬರಾಯಿ, ವಿದ್ಯುಚ್ಛಕ್ತಿ, ರೈಲ್ವೆ ಸೌಕರ್ಯ, ಟ್ರಾನ್ಸ್‌ಪೋರ್ಟೇಷನ್ ಇತ್ಯಾದಿ ಅನುಕೂಲತೆಗಳನ್ನೆಲ್ಲ ಒದಗಿಸಲಾಗುವುದು. ಇಷ್ಟೇ ಅಲ್ಲದೆ ಇಂಥ ಹೊಸ ಇಂಡಸ್ಟ್ರಿಯಲ್ ಕಾಲೋನಿಗಳನ್ನು ತೆಗೆಯತಕ್ಕ ಕಡೆ ಸ್ಕೂಲುಗಳು-ಆಸ್ಪತ್ರೆಗಳು ಇತ್ಯಾದಿಗಳ ವ್ಯವಸ್ಥೆಯನ್ನೆಲ್ಲಾ ಕಲ್ಪಿಸಲಾಗುವುದು. ಹೀಗೆ ನಮ್ಮ ಸಂಸ್ಥಾನದಲ್ಲಿ ಈಗ ಸ್ಥಾಪಿಸಬೇಕೆಂದಿರುವ ಇಂಡಸ್ಟ್ರಿಯಲ್ ಎಸ್ಟೇಟುಗಳ ಬಗ್ಗೆ ಕೇಂದ್ರದಿಂದ ಪಡೆಯತಕ್ಕ ಧನಸಹಾಯವನ್ನು ನಾವು ಅವರಿಗೆ 20 ವರ್ಷಗಳ ವೀರ್ಘಾವಧಿಕಾಲದಲ್ಲಿ ಸುಲಭ ಕಂತುಗಳಲ್ಲಿ ವಾಪಸ್ಸು ಕೊಡುವಂತೆ ಏರ್ಪಾಡು ಮಾಡಲಾಗಿದೆ. ಈ ಹಣವನ್ನು ಈ ಕೈಗಾರಿಕೆಗಳೆಲ್ಲಾ ಚೆನ್ನಾಗಿ ನೆಲೆಗೆ ನಿಂತ ನಂತರ ಕಂತುರೂಪವಾಗಿ ಕೊಡಬೇಕಾಗಿದೆ. ಹೀಗೆ ಇವುಗಳನ್ನು ಸ್ಥಾಪನೆ ಮಾಡಿದಮೇಲೆ ಇವುಗಳನ್ನು ಸರ್ಕಾರದವರಾದರೂ ನಡೆಸಿಕೊಂಡು ಬರಬಹುದು. ಇಲ್ಲವೇ ಕಾರ್ಪೊರೇಷನ್ನಿಗಾದರೂ ವಹಿಸಬಹುದು. ಅಥವಾ ಯಾರಾದರೂ ಖಾಸಗೀ ಜನರು ಮುಂದೆ ಬಂದರೆ ಅವರಿಗಾದರೂ ಇವುಗಳ ಜವಾಬ್ದಾರಿಯನ್ನು ವಹಿಸಿಕೊಡುವುದಕ್ಕೆ ಅವಕಾಶವಿರುತ್ತದೆ. ಎಲ್ಲಾ ತರಹೆಯ ನಿರುದ್ಯೋಗದ ಜನರಿಗೂ ಈ ಯೋಜನೆಯಿಂದ ಅನುಕೂಲ ಕಲ್ಪಿಸಲು ಸಾಧ್ಯವಾಗುತ್ತದೆಂಬ ಘನೋದ್ದೇಶದಿಂದ ಇದನ್ನು ಪ್ರಾರಂಭಿಸಲಾಗಿದೆ. ಅದಕ್ಕಾಗಿ ಈಗ ಈ ಮೊಬಲಗು ಬೇಕಾಗಿದೆ. ಆದಕಾರಣ ಇಂಥ ಅನುಕೂಲವುಳ್ಳ ಬಾಬಿಗೆ ಈ ಹಣವನ್ನು ಕೇಳಿರತಕ್ಕದ್ದು ಸರಿಯೇ ಅಥವಾ ಅಲ್ಲವೇ ಎಂಬುದರ ತೀರ್ಮಾನವನ್ನು ನಾನು ಮಾನ್ಯ ಸದಸ್ಯರಾದ ತಮ್ಮಗಳ ತೀರ್ಮಾನಕ್ಕೆ ಬಿಟ್ಟು ಬಿಡುತ್ತೇನೆ. ಆದರೆ ಹೀಗೆ ಈ ಇಂಡಸ್ಟ್ರೀಸ್‌ಗಳಿಗೆ ಹಾಕಿದ ಹಣ ಪುನಃ ನಮಗೆ ವಾಪಸ್ಸು ಬರುತ್ತದೆಯೇ, ಇವುಗಳನ್ನು ಎಲ್ಲ ಸ್ಥಾಪನೆ ಮಾಡಲಾಗುವುದು, ಹೀಗೆ ಮಾಡುತ್ತಾರೆಂಬುದರ ಬಗ್ಗೆ ಸೂಕ್ತ ವಿವರಣೆಗಳನ್ನು ಕೊಡಬೇಕೆಂಬುದಾಗಿ ಕೆಲವು ಮಾನ್ಯ ಸದಸ್ಯರು ಕೇಳಿಕೊಂಡಿದ್ದರು. ಆ ಕಾರಣ ನಾನೀಗ ಈ ಸ್ಕೀಮಿನ ವಿವರಗಳನ್ನೆಲ್ಲಾ ಸಂಪೂರ್ಣವಾಗಿ ತಿಳಿಸಿರುತ್ತೇನೆ. ಈಗ ಸದ್ಯಕ್ಕೆ ಇಂಥ ಒಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ಮೈಸೂರು ಜಿಲ್ಲೆಯ ಎದುಗಿರಿ ಎಂಬ ಸ್ಥಳದಲ್ಲಿ ತೆರೆಯಲಾಗಿದೆ. ಮುಂದಿನ ವರ್ಷದಿಂದ ಇಂಥ ಎಸ್ಟೇಟುಗಳನ್ನು ಇತರಕಡೆಗಳಿಗೂ ಕೊಡಲಾಗುತ್ತದೆ. ಇದಕ್ಕಾಗಿಯೇ ಈ ವರ್ಷದ ಬಡ್ಜೆಟ್ಟಿನಲ್ಲಿ 50 ಲಕ್ಷ ರೂಪಾಯಿಗಳನ್ನು ಕೂಡ ಒದಗಿಸಿದ್ದೇವೆ. ಮುಂದಿನ ಸಾಲಿನಲ್ಲಿ ಹರಿಹರದಲ್ಲಿ ಒಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ಪ್ರಾರಂಭಿಸುವ ನಿರೀಕ್ಷಣೆಯಿದೆ. ಅಷ್ಟೇ ಅಲ್ಲದೆ ಎಲ್ಲೆಲ್ಲಿ ಯಾವ ಕೈಗಾರಿಕೆಗೆ ಅನುಕೂಲತೆಗಳಿರುತ್ತವೆಯೋ ಅಂಥ ಕಡೆಗಳಲ್ಲೆಲ್ಲಾ ಆಯಾಯ ಕೈಗಾರಿಕೆಗಳನ್ನೆಲ್ಲಾ ಪ್ರಾರಂಭಿಸಲು ಇದರಿಂದ ಸಾಧ್ಯವಿದೆ. ಕೈಮಗ್ಗ ಮತ್ತು ಬಾದಿ ಕೈಗಾರಿಕೆಗಳಿಗೂ ಹೆಚ್ಚು ಪ್ರೋತ್ಸಾಹವನ್ನು ನೀಡಲು ಈ ಯೋಜನೆಯು ತುಂಬ ಸಹಾಯಕಾರಿ ಆಗಿರುತ್ತದೆ. ಆದಕಾರಣ ಇದಕ್ಕೆ ಸರ್ವರೂ ಸಂಪೂರ್ಣ ಸ್ವಾಗತವನ್ನು ನೀಡಿ ಈ ಹಣಕ್ಕೆ ತಮ್ಮೆಲ್ಲರ ಒಮ್ಮತದ ಬೆಂಬಲ ನೀಡಬೇಕೆಂದು ನಾನು ತಮ್ಮೆಲ್ಲರಲ್ಲೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Sri K. HANUMANTHAIYA (Chief Minister).—Sir, Sri Srinivasa Iyengar raised a pertinent query in regard to street lighting in Vidhana Veedhi. The Hon'ble Member knows that the major portion of Vidhana Veedhi lies in the Cubbon Park area. The whole of that area is under Government control. The Corporation has nothing to do with it. Secondly, it is true that in the area covering about three or four furlongs belonging to the Corporation we are continuing these street lighting arrangements in order to make the vicinity beautiful. There are two considerations that deserve sympathetic consideration at the hands of this House so far as the Bangalore Corporation is concerned. For the last four years this House has not given any grants to the Corporation of Bangalore or the City of Mysore. All that we have done by way of financial assistance is, to grant loan only. It was the

practice in the old days to make handsome grants to the Cities of Bangalore and Mysore for purpose of beautifying them. That grant has been completely discontinued. The Corporation is not now in a position to meet expenditure on various items in order to make the City free from slums and other undesirable areas. It was therefore thought necessary that this small expenditure may be directly incurred by Government. Secondly, it is the practice to count the distance in terms of miles to different places in the State from these buildings. The Corporation authorities have been telling us that such State roads which begin from the headquarters of the Government should naturally be under the direct management of Government, and that their upkeep has to be done by Government. That representation seemed to us to be a proper one. We have already implemented this policy in Mysore City to some extent. All State roads which pass through these cities are proposed to be cement-concreted or asphalted as the case may be. Similar considerations ought to apply to Bangalore City. In order to keep the vicinity of Vidhana Soudha, as I have already said, clean and make it beautiful, Government propose not only to put up street lights but also cement-concrete all the roads around it.

So far as industrial estates are concerned, my friend the Minister for Industries has explained it. I thought Hon'ble Members had already taken notice of this very good measure when I made reference to it in my budget speech. If some members do not even remember what was said a day or two earlier and go on criticising it, I can only construe that criticism is made only for the sake of criticism and that I need not take much trouble in answering such criticism. I may say that this industrial estates scheme which is included in the Five-Year Plan is one of the most beneficient schemes that any Government could think of. The educated young men and young women are suffering because of unemployment. This is a measure which aims at giving gainful employment to our youth. It is a scheme which is intended to increase the industrial production and tempo of progress in the country. If this scheme does not deserve the applause of the country, what else will do?

This total amount, Rs. 262·07 lakhs, included in the Appropriation Bill is required for mere adjustments in accounts not involving payment of any cash. Rs. 23·37 lakhs will be covered by assistance from the Centre and Rs. 3 lakhs is to be met from the Sugarcane Cess Fund. Of the balance of Rs. 61·63 lakhs, a major portion is required for meeting essential commitments on subjects like rural communications, national rural water supply, purchase of new drills and drilling tools, well boring section, revised programme in Central aid road works, payment of pensions and death *cum* retirement gratuity under the revised pension rules and to meet payments under 68. I.N.E.D. for which no provision was made in the original estimates. Even this extra sum of Rs. 61·63 lakhs could be met from the savings arising out of the sanctioned grants and there is no additional burden on the State resources. I would therefore commend this Bill for the unanimous acceptance of this House.

Mr. SPEAKER.—The question is:

"That the Mysore Appropriation Bill, 1956 be taken into consideration."

The motion was adopted.

Mr. SPEAKER.—Clauses 2 and 3. The question is:

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Schedule. The question is:

"That the Schedule stand part of the Bill."

The motion was adopted.

The Schedule was added to the Bill.

MR. SPEAKER.—Clause 1. The question is:

"That Clause 1 stand part of the Bill."

The motion was adopted.

Clause 1 was added to the Bill.

MR. SPEAKER.—Short Title and Preamble. The question is:

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

SRI K. HANUMANTHAIYA.—Sir, I beg to move:

"That the Mysore Appropriation Bill, 1956 be passed."

The motion was adopted.

MR. SPEAKER.—Now general discussion on the Budget will begin.

THE BUDGET FOR 1956-57—GENERAL DISCUSSION.

*SRI J. MOHAMED IMAM (Jagalur).—Mr. Speaker, Sir, the Chief Minister yesterday causally remarked that since he has not proposed any measure of fresh taxation, there is very little for criticism. I know very well his idea in not proposing any fresh taxation, (*Sri K. Hanumanthaiya.—How do you know?*) to which I will advert a little later on. Anyhow by a close scrutiny of the Budget and by a close scrutiny of the speech he has made, I am constrained to remark that this budget is a desperate budget prepared by a desperate Finance Minister under desperate circumstances (*Sri V. M. Mascarenhas.—I hope it will not be a desperate House*) and presented to a desperate House. My own feeling is that either the Finance Minister or the administration has not shown any administrative competence or any far-sighted policy in preparing this Budget.

The presentation of Budget in these days is always attended with a good deal of depression often leading to mental depression. I am going to give by facts and figures in what a desperate position we are. I was remarking in my previous budget speeches that the activities of the State may be paralysed if the same policy is continued and I am afraid that what I remarked a few days ago is going to be borne out by facts. There are two occasions given to this House wherein Hon'ble Members of this House will take part in discussion and offer criticisms. These two occasions are very solemn occasions. One is at the time of debate on the Rajpramukh's Address and the second occasion is when we take part in Budget discussion. On both these occasions it is the duty of the members of the Government to hear with reverence the various remarks made by the members of this House. I expect major number of Ministers to be present on these occasions.

SRI K. HANUMANTHAIYA.—The other House is also sitting. In fact I have just now sent words that the Ministers should be present in one or the other House.

SRI J. MOHAMED IMAM.—Because their presence will stimulate our thoughts.

SRI K. HANUMANTHAIYA.—I thank the Leader of the Opposition for the compliments he is paying.

SRI J. MOHAMED IMAM.—It is the duty of the Ministers, whether they are present or not, to take note of the views expressed by the members of this House and give suitable reply. On the last occasion we offered our views in the course of the debate on the Rajpramukh's Address. But to my regret many of our remerks were left unanswered. I may give one or two examples. Many of the members raised the question as to why the elections to the District Boards were postponed. Many complained bitterly. As a result of the postponement of the elections the District Boards have